www.janavaadi.in

# ಜನವಾದಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

ಸಂಪುಟ : 11 ಸಂಚಿಕೆ : 331 ಪುಟ:4 ರಾಯಚೂರು ರವಿವಾರ 20-07-2025 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.

VOLUME : 11 ISSUE : 331 PAGES : 4 RAICHUR SUNDAY 20-07-2025 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

## ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಪೈಲಟ್ ವಾಹನ ಅಪಘಾತ

ಬೆಂಗಳೂರು ಜು 19– ಮೈಸೂರಿನಲ್ಲಿ ನಡೆದ ರಾಜ್ಯ ಸರ್ಕಾರದ ಎರಡು ವರ್ಷದ ಸಾಧನಾ ಸಮಾವೇಶದಲ್ಲಿ ಪಾಲ್ಗೊಂಡು ನಗರಕ್ಕೆ ಮರಳುತ್ತಿದ್ದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪೈಲಟ್ ವಾಹನ ಶ್ರೀರಂಗಪಟ್ಟಣದ ಕೋಡಿಶೆಟ್ಟಿಪುರ ಬಳಿ ಹೆದ್ದಾರಿಯಲ್ಲಿ ಪಲ್ಟಿಯಾಗಿ ನಾಲ್ವರು ಪೊಲೀಸರು ಗಾಯಗೊಂಡಿರುವ ಘಟನೆ ಇಂದು ಮಧ್ಯಾಹ್ನ ನಡೆದಿದೆ.

ಇಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಶ್ರೀರಂಗಪಟ್ಟಣದ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವ ಕೋಡಿಶೆಟ್ಟಿಪುರದ ಬಳಿ ಬರುತ್ತಿದ್ದಾಗ ಪೈಲಟ್ ಜೀಪು ಅಪಘಾತಕ್ಕೀಡಾಗಿದೆ.

ವೇಗವಾಗಿ ಬರುತ್ತಿದ್ದ ಪೊಲೀಸ್ ವಾಹನ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಸುದ್ದಿ ತಿಳಿದ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಗಾಯಗೊಂಡಿರುವ ಪೊಲೀಸರನ್ನು ಸ್ಥಳೀಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದ್ದಾರೆ.

### ರಾಯಚೂರು ಪೇಟೆ ದರ

**ಸಣ್ಣ ಭತ್ತ(ಸೋನಾ)**
ಕನಿಷ್ಠ : 1780
ಗರಿಷ್ಠ : 2019

**ಒಣಕಡಲೆ**
ಕನಿಷ್ಠ : 4689
ಗರಿಷ್ಠ : 5239

**ಕೆಂಪು ತೊಗರಿ**
ಕನಿಷ್ಠ : 6109
ಗರಿಷ್ಠ : 6542

**ಶೇಂಗಾ (ಗುಂಗ್ರು)**
ಕನಿಷ್ಠ : 3955
ಗರಿಷ್ಠ : 5127

**ಸೂರ್ಯಕಾಂತಿ**
ಕನಿಷ್ಠ : –
ಗರಿಷ್ಠ : –

**ಈರುಳ್ಳಿ**
ಕನಿಷ್ಠ : –
ಗರಿಷ್ಠ : –

# ಜೆಡಿಎಸ್ – ಬಿಜೆಪಿ ಸುಳ್ಳುಗಳಿಗೆ ನಮ್ಮ ಅಭಿವೃದ್ಧಿ ಕಾರ್ಯಗಳೇ ಉತ್ತರ : ಸಿಎಂ ಸಿದ್ದರಾಮಯ್ಯ



ಮೈಸೂರು ಜು 19– ಜೆಡಿ–ಎಸ್ – ಬಿಜೆಪಿ ಸುಳ್ಳುಗಳಿಗೆ ನಮ್ಮ ಅಭಿವೃದ್ಧಿ ಕಾರ್ಯಗಳೇ ಉತ್ತರ. ರಾಜ್ಯದ ಜನರ ಮನೆ ಬಾಗಿಲಿಗೆ ಸರ್ಕಾರವನ್ನು ತಲುಪಿಸಿದ್ದೇವೆ. ಈ ಬಗ್ಗೆ ಬಹಿರಂಗ ಚರ್ಚೆಗೆ ಬನ್ನಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು. ಸರ್ಕರದ ಎರಡು ವರ್ಷಗಳ ಸಾಧನಾ ಸಮಾವೇಶ ಮತ್ತು 2,578 ಕೋಟಿ ರೂಪಾಯಿಗಳ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಸರಣಿ ಸುಳ್ಳುಗಳ ಮೂಲಕ ರಾಜ್ಯದ ಜನರ ಹಾದಿ ತಪ್ಪಿಸುತ್ತಿರುವ ಬಿಜೆಪಿ ಮತ್ತು ಜೆಡಿಎಸ್ ನವರು ಒಂದೇ ವೇದಿಕೆಗೆ ಬರಲಿ. ನಮ್ಮ ಸರ್ಕಾರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬಹಿರಂಗ ಚರ್ಚೆ ನಡೆಸೋಣ. ನಾನೂ ಬರುತ್ತೇನೆ ಎಂದು ಸವಾಲೆಸೆದರು.

ಅಭಿವೃದ್ಧಿಗೆ ಸರ್ಕಾರದ ಬಳಿ ಹಣ ಇಲ್ಲ ಎಂದು ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಇವತ್ತಿನ ಅಭಿವೃದ್ಧಿ ಕಾರ್ಯಗಳೇ ಉತ್ತರ. ಬಿಜೆಪಿ – ಜೆಡಿಎಸ್ ನವರಿಗೆ ಈ ಮಟ್ಟಿನ ಮತ್ಸರ ಇರಬಾರದು. ನಮ್ಮ ಅಭಿವೃದ್ಧಿ ಕಾರ್ಯಗಳನ್ನು ಸಹಿಸದೇ ಅತೀ ಮತ್ಸರ ಪಡುತ್ತಿದ್ದಾರೆ ಎಂದು ಟೀಕಿಸಿದರು.

ಸ್ವಂತ ಶಕ್ತಿ ಮೇಲೆ ಅಧಿಕಾರಕ್ಕೆ ಬರಲು ಹೆಚ್‌ಡಿಕೆಗೆ ಸಾಧ್ಯವೇ ಇಲ್ಲ: ರಾಜ್ಯದಲ್ಲಿ ಬಿಜೆಪಿ ಸ್ವಂತ ಶಕ್ತಿಯಿಂದ ಒಮ್ಮೆಯೂ ಅಧಿಕಾರಕ್ಕೆ ಬಂದಿಲ್ಲ. ಪ್ರತೀ ಬಾರಿ ಹಿಂಬಾಗಿಲಿನಿಂದ ಅಧಿಕಾರ ಹಿಡಿಯುತ್ತಿದ್ದಾರೆ. ಆಪರೇಷನ್ ಕಮಲ ಮಾಡಿ ಅಧಿಕಾರಕ್ಕೆ ಬಂದಿದ್ದಾರೆ. ಜೆಡಿಎಸ್‌ನ ಕುಮಾರಸ್ವಾಮಿ ಸ್ವಂತ ಶಕ್ತಿ ಮೇಲೆ ಯಾವತ್ತೂ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ. ರಾಜ್ಯದ ಜನರ ಪ್ರೀತಿ, ವಿಶ್ವಾಸ, ಅಭಿಮಾನ ಉಳಿಸಿಕೊಳ್ಳದ ಇವರಿಗೆ ನಮ್ಮ ಸರ್ಕಾರದ ಬಗ್ಗೆ ಟೀಕಿಸುವ ನೈತಿಕತೆ ಇಲ್ಲ ಎಂದರು.

ಬಿಜೆಪಿ ಮತ್ತು ಜೆಡಿಎಸ್ ರಾಜ್ಯದ ಪರವಾಗಿಲ್ಲ. ರಾಜ್ಯದ ಜನರ ಪರವಾಗಿಲ್ಲ. ಪ್ರತಿ ವರ್ಷ ನಾವು ರಾಜ್ಯದಿಂದ ಕೇಂದ್ರಕ್ಕೆ ಕೊಡುವ ತೆರಿಗೆಯಲ್ಲಿ ರಾಜ್ಯಕ್ಕೆ ಬರುತ್ತಿರುವುದು ಅತ್ಯಲ್ಪ. ರಾಜ್ಯಕ್ಕೆ ಆದ ಅನ್ಯಾಯ ಸರಿಪಡಿಸಿ ಎಂದು ಮೋದಿಯವರಿಗೆ ಕೇಳುವ ಧೈರ್ಯ ಕೇಂದ್ರ ಸಚಿವ ಕುಮಾರಸ್ವಾಮಿ, ಪ್ರಲ್ಹಾದ್ ಜೋಶಿ ಸೇರಿ ಸಂಸದರಾದ ಬಸವರಾಜ ಬೊಮ್ಮಾಯಿ ಸೇರಿ ಯಾರಿಗೂ ಇಲ್ಲ. ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಸೊಲ್ಲೆತ್ತದ ಬಿಜೆಪಿ–ಜೆಡಿಎಸ್ ರಾಜ್ಯದ ಜನಕ್ಕೆ ದ್ರೋಹ ಎಸಗಿದ್ದಾರೆ ಎಂದು ಕಿಡಿಕಾರಿದರು.

ನಾವು ಐದು ಗ್ಯಾರಂಟಿಗಳಲ್ಲದೆ ಅಭಿವೃದ್ಧಿ ಕಾರ್ಯಗಳಿಗೆ ಲಕ್ಷ ಕೋಟಿಯಷ್ಟು ಹಣ ಕೊಟ್ಟಿದ್ದೇವೆ. ನಾವು ಜಾರಿ ಮಾಡಿರುವ ಅಭಿವೃದ್ಧಿ ಕಾರ್ಯಗಳು ಕೇವಲ ಕಾಂಗ್ರೆಸ್ ನವರಿಗೆ ಕೊಟ್ಟಿದ್ದಲ್ಲ. ಬಿಜೆಪಿ–ಜೆಡಿಎಸ್ ಬೆಂಬಲಿಗರು, ಮತದಾರರಿಗೂ ಪ್ರತೀ ದಿನ, ಪ್ರತೀ ತಿಂಗಳೂ ಸರ್ಕಾರದ ನೆರವು ದೊರೆಯುತ್ತಿದೆ. ಮೊನ್ನೆಯಷ್ಟೆ ಶಕ್ತಿ ಯೋಜನೆಯಡಿ ಪ್ರಯಾಣಿಸಿದ 500ನೇ ಕೋಟಿಯ ಮಹಿಳೆಗೆ ನಾನೇ ಉಚಿತ ಟಿಕೆಟ್ ಕೊಟ್ಟಿದ್ದೇನೆ. ಇದು ನಮ್ಮ ಸರ್ಕಾರದ ಬದ್ಧತೆ ಎಂದರು.

ಜವಾಹರಲಾಲ್ ನೆಹರೂ ಅವಧಿಯಿಂದ ಇಂದಿರಾಗಾಂಧಿ, ರಾಜೀವ್ ಗಾಂಧಿ, ಮನಮೋಹನ್ ಸಿಂಗ್ ಅವಧಿಯವರೆಗೂ ಸಾಮಾಜಿಕ ನ್ಯಾಯದ ಕಾರ್ಯಕ್ರಮಗಳನ್ನು ರೂಪಿಸಿ ಜಾರಿ ಮಾಡುತ್ತಿರುವುದು ಕಾಂಗ್ರೆಸ್ ಸರ್ಕಾರ ಎನ್ನುವುದನ್ನು ಇಡೀ ದೇಶ ಮರೆಯಲು ಸಾಧ್ಯವಿಲ್ಲ. ಆಹಾರ ಭದ್ರತಾ ಕಾಯ್ದೆ, ಕಡ್ಡಾಯ ಶಿಕ್ಷಣ ಕಾಯ್ದೆ, ನರೇಗಾ ಎಲ್ಲವೂ ಆಗಿದ್ದು ಕಾಂಗ್ರೆಸ್ ಅವಧಿಯಲ್ಲಿ. ಬಿಜೆಪಿ ಅವಧಿಯಲ್ಲಿ ಇವರು ಏನು ಮಾಡಿದ್ದಾರೆ ತೋರಿಸಲಿ ಎಂದು ಪ್ರಶ್ನಿಸಿದರು.

ಮನುವಾದಿಗಳು ಸಾಮಾಜಿ–ಕ ನ್ಯಾಯ ಮತ್ತು ಹಿಂದುಳಿದ ಸಮುದಾಯಗಳ ಅಭಿವೃದ್ಧಿಯ ವಿರೋಧಿಗಳು, ಸಂವಿಧಾನದ ವಿರೋಧಿಗಳು. ಆದ್ದರಿಂದ ಸಾಮಾಜಿಕ ನ್ಯಾಯದ ಪರವಾಗಿರುವ ನಮ್ಮನ್ನು ಟೀಕಿಸುತ್ತಿದ್ದಾರೆ. ಸಂವಿಧಾನವನ್ನು ಬದಲಾಯಿಸಲು ಬಿಜೆಪಿ ಷಡ್ಯಂತ್ರ ನಡೆಸುತ್ತಿದೆ. ದೇಶದ ಜನ ಮತ್ತು ಕಾಂಗ್ರೆಸ್ ಪಕ್ಷ ಬಿಜೆಪಿ ಮತ್ತು ಮನುವಾದಿಗಳ ಷಡ್ಯಂತ್ರ ಸೋಲಿಸುತ್ತಾರೆ ಎಂದರು.

### ರಾಯಚೂರು ಜಿಲ್ಲೆ ಇಂದಿನ ಹವಾಮಾನ ಮುನ್ಸೂಚನೆ



ಗರಿಷ್ಠ : 30 ಸೆಲ್ಸಿಯಸ್
ಕನಿಷ್ಠ : 23 ಸೆಲ್ಸಿಯಸ್

## ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಛೇರಿಗೆ ಸಚಿವ ಎನ್‌ಎಸ್ ಬೋಸರಾಜು ಭೇಟಿ



ಜನವಾದಿ ವಾರ್ತೆ

ರಾಯಚೂರು ಜು 19– ಮಕ್ಕಳಲ್ಲಿ ಸೃಜನಶೀಲ ಅನ್ವೇಷಣೆಗಳಿಗೆ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ರಾಯಚೂರಿನಲ್ಲಿ ಬಾಲ ಭವನ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಅವರೊಂದಿಗೆ ದೂರವಾಣಿ ಮುಖಾಂತರ ಮಾತನಾಡಿ ಚರ್ಚಿಸಿದರು.

ರಾಯಚೂರಿನ ಮಂತ್ರಾಲಯ ರಸ್ತೆಯಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯಾಲಯಕ್ಕೆ ದಿಢೀರ್ ಭೇಟಿ ನೀಡಿ, ಇಲಾಖೆಯ ಕಾರ್ಯವೈಕ–ರಿಯನ್ನು ಪರಿಶೀಲಿಸಿ ನಂತರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ನವೀನ್ ಕುಮಾರ ಅವರೊಂದಿಗೆ ಇಲಾಖೆ ಪ್ರಗತಿ ಹಾಗೂ ಬಾಲ ಭವನದ ಕುರಿತು ಮಾಹಿತಿ ಪಡೆದರು.

ಬಾಲ ಭವನ ನಿರ್ಮಾಣದಿಂದ ಮಕ್ಕಳ ಕಲಿಕೆಗೆ ಹಾಗೂ ಗಳಿಕೆಗೆ ಅನುಕೂಲವಾಗಲಿದೆ ಎಂದು ಉಪ ನಿರ್ದೇಶಕರು ಸಚಿವ ಎನ್‌ಎಸ್ ಬೋಸರಾಜು ಅವರಿಗೆ ಮಾಹಿತಿ ನೀಡಿದ ಮೇರೆಗೆ ☛4

## ಕುರುಬದೊಡ್ಡಿ, ಸಿಂಗನೋಡಿ, ಚಂದ್ರಬಂಡಾ ರೈತರು ಭೂಮಿ ಸ್ವಾಧೀನ ವಿರೋಧಿಸಿ 22 ರಂದು ಪ್ರತಿಭಟನೆ– ಮಾರೆಪ್ಪ ಹರವಿ



ಜನವಾದಿ ವಾರ್ತೆ

ರಾಯಚುರು ಜು 19– ತಾಲೂಕಿನ ಕುರುಬದೊಡ್ಡಿ, ಚಂದ್ರಬಂಡ ಮತ್ತು ಸಿಂಗನೋಡಿ ಗ್ರಾಮಗಳ ಕೃಷಿ ಫಲವತ್ತಾದ ಭೂಮಿಯನ್ನು ಜಿಲ್ಲಾಡಳಿತ ಕೈಗಾರಿಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸ್ವಾಧೀನಪಡಿಸಿಕೊಳ್ಳುತ್ತಿರುವದನ್ನು ವಿರೋಧಿಸಿ ಜು.22 ರಂದು ಭೂ ಸ್ವಾದೀನ ಅಧಿಸೂಚನೆಗೆ ಬೆಂಕಿ ಹಚ್ಚುವ ಮೂಲಕ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಜನಶಕ್ತಿ ಸಂಘಟನೆ ಜಿಲ್ಲಾಧ್ಯಕ್ಷ ಮಾರೆಪ್ಪ ಹರವಿ ಹೇಳಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ, ರಾಯಚೂರು ಹೋಬಳಿಯ ಕುರುಬದೊಡ್ಡಿ ಗ್ರಾಮದ 147 ಎಕರೆ, ಚಂದ್ರಬಂಡಾ ಹೋಬಳಿಯ 528 ಎಕರೆ ಮತ್ತು ಸಿಂಗನೋಡಿ ಗ್ರಾಮದ 98 ಎಕರೆ ಭೂಮಿಯನ್ನಯು ಭೂ ಸ್ವಾಧೀನಪಡಿಸಿಕೊಳ್ಳಲು ಜು.28 ರಂದು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು ಭೂ ಹಿಡುವಳಿದಾರರ ಸಭೆ ನಿಗಧಿ ಮಾಡಿದ್ದಾರೆ. ಆದರೆ ಭೂ ಸ್ವಾಧೀನಕ್ಕೆ ಯಾವ ರೈತರು ಸಿದ್ದರಿಲ್ಲ. ಕೃಷಿಯನ್ನೇ ಅವಲಂಬಿಸಿರುವ ಹಿಡುವಳಿದಾರರು ಭೂ ಸ್ವಾಧೀನ ಪ್ರಕ್ರಿಯೆಯಿಂದ ಆತಂಕಕ್ಕೆ ಸಿಲುಕಿದ್ದಾರೆ. ಭೂ ಸ್ವಾಧೀನ ಕಾಯ್ದೆ 2013 ಪ್ರಕಾರ ಶೇ.80 ರಷ್ಟು ಹಿಡುವಳಿದಾರರು ಸಮ್ಮತಿ ಸೂಚಿಸಿದರೆ ಮಾತ್ರ ಸ್ವಾಧೀನ ಪಡಿಸಿಕೊಳ್ಳಲು ಅವಕಾಶವಿದೆ. ಆದರೆ ಯಾವ ರೈತರು ಭೂಮಿ ನೀಡಲು ಸಿದ್ದರಿಲ್ಲ. 22 ರಂದು ನಗರ ಬಸನವಭಾವಿ ವೃತ್ತದಿಂದ ಹಳೆ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾ ☛4

## ಬುದ್ಧ ಅಮರನಾಥ ಯಾತ್ರೆಗೆ ಸಜ್ಜು, ಭದ್ರತೆ ಪರಿಶೀಲನೆ

ಜಮ್ಮು ಜು 19 – ಪೂಂಚ್ ಜಿಲ್ಲೆಯಲ್ಲಿ ಮುಂಬರುವ 13 ದಿನಗಳ ಬುದ್ಧ ಅಮರನಾಥ ಯಾತ್ರೆಯ ಸುಗಮ ನಿರ್ವಹಣೆಗೆ ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಹಿರಿಯ ಅಧಿಕಾರಿಗಳು ವ್ಯವಸ್ಥೆಗಳನ್ನು ಪರಿಶೀಲಿಸಿದ್ದಾರೆ. ಪೊಲೀಸ್ ಉಪ ಮಹಾನಿರೀಕ್ಷಕ ತೇಜಿಂದರ್ ಸಿಂಗ್ ಅವರು ಪೂಂಚ್‌ನಲ್ಲಿ ಭದ್ರತೆಯನ್ನು ಪರಿಶೀಲಿಸಿದರು ಮತ್ತು ಭಕ್ತರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವ ಮಹತ್ವವನ್ನು ಒತ್ತಿ ಹೇಳಿದರು.

ಮೊದಲ ತಂಡವು ಜುಲೈ 28 ರಂದು ಜಮ್ಮುವಿನ ಭಗವತಿ ನಗರ ಬೇಸ್‌ಕ್ಯಾಂಪ್‌ನಿಂದ ಸಂಪೂರ್ಣ ಭದ್ರತಾ ವ್ಯವಸ್ಥೆಗಳ ನಡುವೆ ನಿಯಂತ್ರಿತ ಬೆಂಗಾವಲು ಪಡೆಯಲ್ಲಿ ಪೂಂಚ್‌ನ ಮಂಡಿ ತಹಸಿಲ್ ಕಡೆಗೆ ಚಲಿಸಲಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಜಮ್ಮು ವಿಭಾಗೀಯ ಆಯುಕ್ತ ರಮೇಶ್ ಕುಮಾರ್ ಮತ್ತು ಪೊಲೀಸ್ ಮಹಾನಿರ್ದೇಶಕ (ಐಜಿಪಿ) ಭೀಮ್ ಸೇನ್ ಟುಟಿ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಯಾತ್ರಿಕರಿಗೆ ಅನುಕೂಲವಾಗುವಂತೆ ಭಗವತಿ ನಗರ ಮತ್ತು ಜಮ್ಮು ರೈಲು ನಿಲ್ದಾಣದಲ್ಲಿ ಸಹಾಯ ಕೇಂದ್ರ ಮತ್ತು ನೋಂದಣಿ ಕೌಂಟರ್ ಸ್ಥಾಪಿಸಲು ಕುಮಾರ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

## ಕಲ್ಮಲ ಶ್ರೀ ಕರಿಯಪ್ಪ ತಾತನವರ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆ: ರಥದ ಬೀದಿಯಲ್ಲಿ ಸ್ವಚತೆಗೆ ವಿಶೇಷ ಆದ್ಯತೆ ನೀಡಿ–ಬಸನಗೌಡ ದದ್ದಲ




ಜನವಾದಿ ವಾರ್ತೆ

ರಾಯಚೂರು ಜು 19– ತಾಲ್ಲೂಕಿನ ಪ್ರಸಿದ್ಧ ಸುಕ್ಷೇತ್ರ ಶ್ರೀ ಕರಿಯಪ್ಪ ತಾತನವರ ಜಾತ್ರಾ ಮಹೋತ್ಸವವು ಜು.29 ರಂದು ನಾಗರ ಪಂಚಮಿ ದಿನದಂದು ಸಂಜೆ 6–30 ಮಹಾರಥೋತ್ಸವ ನಡೆಯಲಿದ್ದು, ಅಗತ್ಯ ಪೂರ್ವ ಸಿದ್ಧತೆಯನ್ನು ಕೈಗೊಳ್ಳುವಂತೆ ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರಿಂದು ನಗರದಲ್ಲಿ ಶಾಸಕರ ಕಛೇರಿಯಲ್ಲಿ ಶ್ರೀ ಕರಿಯಪ್ಪ ತಾತನವರ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ತಾಲ್ಲೂಕ ದಂಡಾದಿಕಾರಿ ಹಾಗೂ ತಾಲ್ಲೂಕ ಅಧಿಕಾರಿಗಳು ಸ್ವಚ್ಛತೆಗೆ ನೀರಿಗೆ ಹಾಗೂ ಸುರಕ್ಷತೆಗೆ ಹೆಚ್ಚಿನ ಗಮನ ಹರಿಸಬೇಕೆಂದು ಸೂಚಿಸಿದರು. ಬೇರೆ ಬೇರೆ ರಾಜ್ಯ ಹಾಗೂ ಜಿಲ್ಲೆಗಳಿಂದ ಸಾವಿರಾರು ಭಕ್ತರು ಆಗಮಿಸುತ್ತಿದ್ದು, ಭಕ್ತರಿಗೆ ತೊಂದರೆಯಾಗದಂತೆ ನಿಗಾ ವಹಿಸಬೇಕೆಂದರು.

ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ, ಪೋಲಿಸ್ ಇಲಾಖೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಗ್ರಾಮೀಣ ಕುಡಿಯುವ ನೀರು, ಲೋಕೋಪಯೋಗಿ ಇಲಾಖೆ, ಪಂಚಾಯತರಾಜ್ ಇಂಜಿನಿಯರಿಂಗ್, ಜೆಸ್ಕಾಂ, ಅಬಕಾರಿ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಊರಿನ ಹಿರಿಯ ಮುಖಂಡರುಗಳು ಸುತ್ತಮುತ್ತಲಿನ ಗ್ರಾಮಗಳ ಮುಖಂಡರುಗಳು, ನಾಮನಿರ್ದೇಶನ ಸದಸ್ಯರುಗಳು ಗ್ರಾ. ಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಗ್ರಾಮಸ್ಥರು, ಉಪಸ್ಥಿತರಿದ್ದರು.

## ಹೆಲ್ಮೆಟ್ ಧರಿಸಿದ್ದರೆ ಅಪಘಾತದಲ್ಲಿ ಸಾವು ಸಂಭವಿಸುವದು ಕ್ಷೀಣ – ಪಿಐ ದುರುಗಪ್ಪ




ಜನವಾದಿ ವಾರ್ತೆ

ಸಿಂಧನೂರು ಜು 19 – ಬೈಕ್ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಆಗ ಮಾತ್ರ ಅಪಘಾತದಲ್ಲಿ ಸಾವು ಸಂಭವಿಸುವ ಸಾಧ್ಯತೆ ಕಡಿಮೆ ಇರುತ್ತದೆ. ನಗರ ಪೊಲೀಸ್ ಠಾಣೆಯ ಪಿಐ ದುರುಗಪ್ಪ ಡೊಳ್ಳಿನ್ ಹೇಳಿದರು.

ಹೆಲ್ಮೆಟ್ ಬಳಕೆ ಕಡ್ಡಾಯಗೊಳಿಸಿರುವದರಿಂದ ಶನಿವಾರ ನಗರದ ಮಹಾತ್ಮ ಗಾಂಧಿ ವೃತದಲ್ಲಿ ತ್ರಿಭುವನ ಹೋಂಡಾ ಶೋ ರೂಂ ಹಾಗೂ ಪೊಲೀಸ್ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಬೈಕ್ ಸವಾರ–ರಿಗೆ ಉಚಿತ ಹೆಲ್ಮೆಟ್ ವಿತರಣಾ ಕಾರ್ಯಕ್ರಮದಲ್ಲಿ ಹೆಲ್ಮೆಟ್ ವಿತರಿಸಿ ಅವರು ಮಾತನಾಡಿದರು. ಇತ್ತೀಚಿಗೆ ಬೈಕ್ ಸವಾರರು ಅಪಘಾತದಲ್ಲಿ ಮೃತಪಟ್ಟವರಲ್ಲಿ ಹೆಲ್ಮೆಟ್ ಇಲ್ಲದೆ ಚಾಲನೆ ಮಾಡಿರುವದೇ ಪ್ರಮುಖ ಕಾರಣವಾಗಿದೆ. ಹಾಗಾಗಿ ಬೈಕ್ ಓಡಿಸುವ ವ್ಯಕ್ತಿ ಹಾಗೂ ಹಿಂದುಗಡೆ ಕುಳಿತಿರುವ ವ್ಯಕ್ತಿಯು ಹೆಲ್ಮೆಟ್ ಧರಿಸಬೇಕು. ಇದು ಸರ್ಕಾರದ ಕಡ್ಡಾಯ ನಿಯಮವಾಗಿದೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುಗೌಡ ಬಾದರ್ಲಿ ಮಾತನಾಡಿ, ಹೆಲ್ಮೆಟ್‌ಗಳಿಲ್ಲದೇ ಬೈಕ್ ಓಡಿಸುವ ಸಂದರ್ಭದಲ್ಲಿ ಅಪಘಾತಗಳು ಸಂಭವಿಸಿದರೆ ಪ್ರಾಣಕ್ಕೆ ಆಪತ್ತು ಬರಲಿದೆ. ಹೆಲ್ಮೆಟ್ ಧರಿಸುವದಿಂದ ಪ್ರಾಣ ಉಳಿಸಿಕೊಳ್ಳಬಹುದಾಗಿದೆ. ಹೆಲ್ಮೆಟ್ ಧರಿಸದೇ ಬೈಕ್ ಸವಾರ ಮಾಡಿದರೆ ಪೊಲೀಸರು ದಂಡ ವಿಧಿಸುತ್ತಾರೆ. ಕೆಲವು ಸಂದರ್ಭದಲ್ಲಿ ಬೈಕ್ ಚಾಲಕರು ನನಗೆ ಸೇರಿದಂತೆ ಬೇರೆ ಬೇರೆ ರಾಜಕಾರಣಿಗಳಿಗೆ ಫೋನ್ ಮಾಡಿ, ಪೊಲೀರಿಗೆ ರೆಕಮೆಂಡ್ ಮಾಡಿಸುತ್ತಾರೆ. ನಂತರ ಅಪಘಾತಗಳ ಸಂಭವಿಸಿದರೆ ಯಾರು ಜೊತೆಗಿರಲ್ಲ. ಕುಟುಂಬದ ☛4

## ದೇವದುರ್ಗ ಟೋಲ್ ಗೇಟ್ ಮುಚ್ಚಲು ಆದೇಶಿಸಿದರು ಪಾಲನೆಯಾಗದ ಉಸ್ತುವಾರಿ ಸಚಿವರ ಆದೇಶ – ಶಾಸಕಿಯಿಂದ ಅಹೋರಾತ್ರಿ ಪ್ರತಿಭಟನೆ



ಜನವಾದಿ ವಾರ್ತೆ

ರಾಯಚೂರು ಜು 19– ರಾಯಚೂರಿನಲ್ಲಿ ಜರುಗಿದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ತಿಂಥಣಿ ಬ್ರಿಜ್ ದಿಂದ ಕಲಮಲಾ ಕ್ರಾಸ್ ರಸ್ತೆ ಮಾರ್ಗ ಮಧ್ಯೆ ಅವೈಜ್ಞಾನಿಕವಾಗಿ 2 ಟೋಲ್‌ಗೇಟ್‌ಗಳನ್ನು ಹಾಕಿ ಕರವಸೂಲಿ ಮಾಡುವದನ್ನು ಸಭೆಯಲ್ಲಿಯೇ ನೆಲದ ಮೇಲೆ ಕುಳಿತು ಶಾಸಕಿ ಕರೆಮ್ಮ ಜಿ.ನಾಯಕ ಗಮನ ಸೆಳೆದಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ್ ತಾತ್ಕಾಲಿವಾಗಿ ಟೋಲ್ ಗೇಟ್‌ಗಳಿಂದ ಕೂಡಲೇ ಕರವಸೂಲಿಯನ್ನು ನಿಲ್ಲಿಸುವ ಭರವಸೆ ನೀಡಿ,ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದರು.ಬೆಂಗಳೂರಿನಲ್ಲಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳ ಸಭೆ ನಡೆಸಿ,ಶಾಶ್ವತವಾಗಿ ರದ್ದು ಪಡಿಸುವ ಭರವಸೆ ನೀಡಿದ್ದರು.

ಜಿಲ್ಲೆಯಲ್ಲಿ ಉಸ್ತುವಾರಿ ಸಚಿವರ,ಜಿಲ್ಲಾಧಿಕಾರಿಗಳ ಮಾತೇ ನಡೆಯುವದಿಲ್ಲ ಎಂಬುದಾದರೆ ಇದೆಂತ ಸರಕಾರದ ಆಡಳಿತ ಎಂಬ ಪ್ರಶ್ನೆ ಎದುರಾಗಿದೆ.

ಆದರೆ ಸಭೆ ಮುಗಿಸಿಕೊಂಡು ರಾಯಚೂರಿನಿಂದ ದೇವದುರ್ಗಕ್ಕೆ ಬರುವಾಗ ಕಾಕರಗಲ್ ಬಳಿ ಇರುವ ಟೋಲ್‌ಗೇಟ್‌ನಲ್ಲಿ ಕರವಸೂಲಿ ಮಾಡುತ್ತಿರುವದನ್ನು ☛4

## ರಸಗೊಬ್ಬರ ಕೃತಕ ಅಭಾವದ ಹಿಂದೆ ಹುನ್ನಾರ ಸೊಸೈಟಿಗಳಿಂದ ಪೂರೈಕೆಯಾಗದ ಗೊಬ್ಬರ– ಚಾಮರಸ ಪಾಟೀಲ್ ಆರೋಪ



ಜನವಾದಿ ವಾರ್ತೆ

ರಾಯಚೂರು ಜು 19– ಜಿಲ್ಲೆಯಲ್ಲಿ ರಸಗೊಬ್ಬರ ಕೃತಕ ಅಭಾವ ಸೃಷ್ಟಿಸಲಾಗುತ್ತಿದೆ. ಸಹಕಾರ ಸಂಘಗಳ ಮೂಲಕ ರಸಗೊಬ್ಬರ ವಿತತರಿಸದೇ ಖಾಸಗಿ ವ್ಯಾಪಾರಸ್ಥರ ಮೂಲಕ ಮಾರಾಟಮಾಹುವಹುನ್ನಾರ ನಡೆದಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಆರೋಪಿಸಿದರು.

ಅವರಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿ ಕೇಂದ್ರ ಸರ್ಕಾರ ನ್ಯಾನೋ ತಂತ್ರಜ್ಞಾನರ ಯೂರಿಯಾ ಗೊಬ್ಬರ ಮಾರಾಟ ಮಾಡುವ ಉದ್ದೇಶದಿಂದ ಕೃತಕ ಅಭಾವ ಸೃಷ್ಟಿಸಿರುವ ಸಂಶಯಗಳಿವೆ. ಸೂಸೈಟಿಗಳ ಮೂಲಕ ರಸಗೊಬ್ಬರ ಮಾರಾಟ ಮಾಡಿದರೆ ಎಂಆರ್‌ಪಿ ದರದಲ್ಲಿ ಮಾರಾಟ ಮಾಡಬೇಕಾಗುತ್ತದೆ ಎಂದು ಖಾಸಗಿಯವರ ಮೂಲಕ ದುಪ್ಪಟ್ಟು ಬೆಲೆಗೆ ಮಾರಾಟ ಮಾಡಲು ತಂತ್ರಗಳು ನಡೆಯುತ್ತಿವೆ. ರಾಜಕೀಯ ನಾಯಕರು, ಅಧಿಕಾರಿಗಳು, ಉಸ್ತುವಾರಿ ಸಚಿವರೂ ಸಹ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು. ಕಳಪೆ ರಸಗೊಬ್ಬರ ಮಾರುಕಟ್ಟೆಗೆ ☛4

## ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿವಿ: ವಾಣಿಜ್ಯ ವಿಭಾಗದಲ್ಲಿ ಬೀಳ್ಕೊಡುಗೆ ಸಮಾರಂಭ

# ವಾಣಿಜ್ಯ ವಿದ್ಯಾರ್ಥಿಗಳಿಗೆ ಜ್ಞಾನದ ಜೊತೆ ಕೌಶಲ್ಯ ಅಗತ್ಯ : ಡಾ.ಚನ್ನಪ್ಪ.ಎ

ಜನವಾದಿ ವಾರ್ತೆ



ರಾಯಚೂರು ಜು 18– ವ್ಯಾಪಾರ, ವಾಣಿಜ್ಯ, ಉದ್ಯಮವನ್ನು ಯಶಸ್ವಿಯಾಗಿ ನಿರ್ವಹಿಸಲು ವಿದ್ಯಾರ್ಥಿಗಳಲ್ಲಿ ಅಗತ್ಯವಾದ ಕಲ್ಪನೆ, ಜ್ಞಾನ, ಕೌಶಲ್ಯ ಮತ್ತು ವರ್ತನೆಗಳನ್ನು ಅಭಿವೃದ್ಧಿ ಪಡಿಸುವ ಉತ್ಸಾಹ ನಿಮ್ಮಲ್ಲಿ ಮೂಡಬೇಕು ಎಂದು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ.ಚನ್ನಪ್ಪ.ಎ ಕೆ.ಎ.ಎಸ್.(ಸೀನಿಯರ್ ಸೂಪರ್ ಟೈಂ ಸ್ಕೇಲ್)ಅವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಾಣಿಜ್ಯ ಅಧ್ಯಯನ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ವಿದ್ಯಾರ್ಥಿಗಳಿಂದ ಬೀಳ್ಕೊಡುಗೆ ಸಮಾರಂಭದಲ್ಲಿ ವಾಣಿಜ್ಯ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸಂದರ್ಶನಕ್ಕಾಗಿ ವಿಶ್ವವಿದ್ಯಾಲಯವು ನಿರಂತರ ಸಹಕರಿಸುತ್ತದೆ ಎಂದು ಮಾತನಾಡಿದ ಅವರು, ಉತ್ತಮ ಸಮಾಜ ನಿರ್ಮಿಸಲು ವಿದ್ಯಾರ್ಥಿಗಳಲ್ಲಿ ಬದ್ಧತೆಯ ಮನೋಭಾವ, ಕಠಿಣ ಪರಿಶ್ರಮ ಇದ್ದಾಗ ಮಾತ್ರ ಗುರಿ ಮುಟ್ಟಲು ಸಾಧ್ಯ. ಪ್ರಾಮಾಣಿಕತೆಯಿಂದ ದುಡಿದು ಉನ್ನತ ಸ್ಥಾನಕ್ಕೇರಿ ಸಮಾಜದ ಒಳ್ಳೆಯ ವ್ಯಕ್ತಿಗಳಾಗಿ ಹೊರಹೊಮ್ಮಿರಿ ಎಂದು ಸ್ನಾತಕೋತ್ತರ ವಾಣಿಜ್ಯ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಾಣಿಜ್ಯ ವಿಭಾಗದ ಮುಖ್ಯಸ್ಥರು ಹಾಗೂ ಕಲಾನಿಕಾಯದ ಡೀನರಾದ ಪ್ರೊ.ಪಾರ್ವತಿ ಸಿ.ಎಸ್. ಮಾತನಾಡಿ, ವಾಣಿಜ್ಯ ಅಧ್ಯಯನ ವಿಭಾಗವು ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳೊಂದಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿದೆ ವಿದ್ಯಾರ್ಥಿಗಳಲ್ಲಿ ವಸ್ತುನಿಷ್ಠ ವಿಚಾರಣೆಯ ಮನೋಭಾವವನ್ನು ಬೆಳೆಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತದೆ. ಸಮಾಜಕ್ಕೆ ನಿಮ್ಮಿಂದ ಒಂದು ಉತ್ತಮ ಕೊಡುಗೆ ನೀಡಿ, ನಿರಂತರ ಕಲಿಕೆ ನಿಮ್ಮದಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಅತಿಥಿಗಳಾಗಿ ವಿವಿಯ ಹಣಕಾಸು ಅಧಿಕಾರಿ ಹಾಗೂ ಉಪಕುಲಸಚಿವರಾದ ಡಾ.ಕೆ. ವೆಂಕಟೇಶ್ ಅವರು ಮಾತನಾಡಿ, ವಾಣಿಜ್ಯ ವಿದ್ಯಾರ್ಥಿಗಳಲ್ಲಿ ಯೋಜನೆ, ನಿರ್ವಹಿಸುವ ಶಕ್ತಿ ನಿಮ್ಮಲ್ಲಿ ಮೂಡಲಿ, ಯಾವುದೇ ಕೆಲಸದಲ್ಲಿ ನೀವು ತೊಡಗಿದರು ಪ್ರಾಮಾಣಿಕ ದುಡಿಮೆಗೆ ಸಮಾಜ ನಿಮ್ಮನ್ನು ಗೌರವಿಸುವುದು. ಆರ್ಥಿಕ ವ್ಯವಸ್ಥೆ, ನೀತಿಗಳ ಬಗ್ಗೆ ಕಲೆತರೆ ಜಾಗತಿಕ ಆರ್ಥಿಕತೆಯ ಬಗ್ಗೆ ಮತ್ತು ಹಣಕಾಸು ಮಾರುಕಟ್ಟೆಗಳಿಂದ ನಿಮಗೆ ಹೆಚ್ಚಿನ ಜ್ಞಾನ ಸಿಗುತ್ತದೆ. ವಿದ್ಯಾರ್ಥಿಗಳ ಕಲ್ಪನೆ ಚಿಕ್ಕದಾಗಿದ್ದರೂ ಅದಕ್ಕೆ ಜೀವ ತುಂಬಿರಿ, ಸಕಾರಾತ್ಮಕ ಮನಸ್ಥಿತಿಯನ್ನು ಹೊಂದಿ ಮುನ್ನಡೆಯಿರಿ ಎಂದು ತಿಳಿಸಿದರು.

ಕಾರ್ಯಕ್ರಮದ ಅತಿಥಿಗಳಾದ ವಾಣಿಜ್ಯ ವಿಭಾಗದ ಡಿನರಾದ ಪ್ರೊ.ಪಿ.ಭಾಸ್ಕರ್ ಮಾತನಾಡಿ, ವಾಣಿಜ್ಯ ಶಿಕ್ಷಣವು ಇಂದು ದೇಶದಲ್ಲಿ ಹೆಚ್ಚು ಬೇಡಿಕೆಯಿರುವ ಕೋರ್ಸ್‌ಗಳಲ್ಲಿ ಒಂದಾಗಿದೆ. ನಮ್ಮ ದೇಶದ ನಾಗರಿಕರಾಗಿ ನಿಮ್ಮಲ್ಲಿ ವಿವಿಧ ರೀತಿಯ ಕೌಶಲ್ಯಗಳನ್ನು ಬೆಳೆಸಿಕೊಂಡರೆ, ಉತ್ತಮ ಸಮಾಜ ನಿರ್ವಹಿಸಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದ ಅತಿಥಿಗಳಾದ ರಸಾಯನಶಾಸ್ತ್ರ ಮುಖ್ಯಸ್ಥರು ಡಾ.ಲತಾ ಎಮ್.ಎಸ್ ಮಾತನಾಡಿ, ನಿಮ್ಮ ಶಿಕ್ಷಣ ಕಲಿಕೆ ಇನ್ನು ಮುಂದೆ ಪ್ರಾರಂಭವಾಗುತ್ತದೆ ಯಾವುದೇ ಕೆಲಸ ಮಾಡಲು ನೀವು ಮೊದಲು ಶಿಕ್ಷಣದಲ್ಲಿ ಅರ್ಹರಾಗಿರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅತಿಥಿಗಳಾದ ವಿದ್ಯಾರ್ಥಿ ಕಲ್ಯಾಣ ಅಧಿಕಾರಿ ಡಾ.ಜಿ.ಎಸ್.ಬಿರಾದಾರ ಮಾತನಾಡಿ, ವಾಣಿಜ್ಯ ವಿದ್ಯಾರ್ಥಿಗಳಿಗೆ ಬಹು ರಾಷ್ಟ್ರೀಯ ಕಂಪನಿಗಳಲ್ಲಿ ಸಾಕಷ್ಟು ಉದ್ಯೋಗ ಅವಕಾಶಗಳಿವೆ ಅದರ ಸದುಪಯೊಗ ಪಡೆದುಕೊಳ್ಳಲು ನೀವು ಮೊದಲು ಉನ್ನತ ಶಿಕ್ಷಣ ಹಾಗೂ ಉತ್ತಮ ಕೌಶಲ್ಯಗಳಲ್ಲಿ ಅರ್ಹರಾಗಿರಬೇಕು ಎಂದು ಹೇಳಿದರು.

ವಾಣಿಜ್ಯ ವಿಭಾಗದ ಅತಿಥಿ ಉಪನ್ಯಾಸಕರಾದ ಹಾಗೂ ಸಂಯೋಜಕ ಡಾ.ಟಿ.ವಾರೆಪ್ಪ, ಡಾ.ಗೀತಾ ಗೋಪಾಲಕೃಷ್ಣ, ಸುಧಾ ಗಂಜಿಹಾಳ, ಗೋವಿಂದರೆಡ್ಡಿ, ಗೋಕುಲ್ ತಿಲಕ್ ವೇದಿಕೆ ಮೇಲೆ ಉಪಸ್ಥಿತರಿದ್ದರು. ಹಾಗೂ ವಿವಿಧ ವಿಭಾಗಗಳ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಾಣಿಜ್ಯ ವಿದ್ಯಾರ್ಥಿಗಳಾದ ಲಕ್ಷ್ಮೀ ಪ್ರಾರ್ಥಿಸಿದರು, ಹೆಚ್.ಶರಣಬಸವ ಹೂಗಾರ ಸ್ವಾಗತಿಸಿದರು. ಸುಮಾ ಬಡಿಗೇರ್ ಮತ್ತು ಕೇಶವ ಕಾರ್ಯಕ್ರಮ ನಿರೂಪಿಸಿದರೆ, ತನುಜಾ ವಂದಿಸಿದರು.


## ರಾಯಚೂರಿನ ಸಣ್ಣ ಉದ್ಯಮಿದಿಂದ ಡಿಜಿಟಲ್ ಸೇವೆಗಳು

ನಮಸ್ಕಾರ, ನಾನು ಅಮಿತ್ ದಂಡಿನ್. 2017ರಿಂದ ರಾಯಚೂರಿನಲ್ಲಿ ಸಣ್ಣ ಉದ್ಯಮವನ್ನು ಯಶಸ್ವಿಯಾಗಿ ನಡೆಸುತ್ತಿದ್ದೇನೆ.

ನಮ್ಮ ಸಂಸ್ಥೆಯು ಈಗಾಗಲೇ ಕ್ಲೌಡ್ ಆಧಾರಿತ ರೆಡಿ ಇಪೇಪರ್ ವೆಬ್‌ಸೈಟ್‌ನ್ನು ಅಭಿವೃದ್ಧಿಪಡಿಸಿದೆ.

ನೀವು ಅಥವಾ ನಿಮ್ಮ **Organization**ಗೆ ಈ ರೀತಿಯ ಸೇವೆ ಅಗತ್ಯವಿದ್ದರೆ, ದಯವಿಟ್ಟು ಸಂಪರ್ಕಿಸಿ:

ಕರೆ / ವಾಟ್ಸಾಪ್: +91-8792582039

ಸ್ಥಳೀಯ ಉದ್ಯಮವನ್ನು ಬೆಂಬಲಿಸಿ.

" ಸ್ಥಳೀಯ ಉದ್ಯಮವನ್ನು ಬೆಂಬಲಿಸಿ - ನಿಮ್ಮ ಬೆಂಬಲವೇ ನಮ್ಮ ಶಕ್ತಿ! "


# ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣವಚನ ಸ್ವೀಕರಿಸಿದ ವಿಭು ಬಖ್ರು



ಬೆಂಗಳೂರು ಜು 19– ಕರ್ನಾಟಕ ರಾಜ್ಯ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿಯಾಗಿ ವಿಭು ಬಖ್ರು ಅವರು ಇಂದು ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಪ್ರಮಾಣವಚನ ಬೋಧಿಸಿದರು.

ರಾಜ ಭವನದ ಗಾಜಿನ ಮನೆಯಲ್ಲಿ ಶನಿವಾರ ನಡೆದ ಸರಳ ಸಮಾರಂಭದಲ್ಲಿ ನ್ಯಾಯಮೂರ್ತಿ ಬಖ್ರು ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಬಳಿಕ ರಾಜ್ಯ ವಕೀಲರ ಪರಿಷತ್‌ನಿಂದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಸಭಾಂಗಣದಲ್ಲಿ ನಡೆದ ಸ್ವಾಗತ ಕಾರ್ಯಕ್ರಮದಲ್ಲಿ ಮಾತನಾಡಿದ ನ್ಯಾಯಮೂರ್ತಿ ಬಖ್ರು, ದೇಶದಲ್ಲಿ ಕಾನೂನು ಮತ್ತು ಸಾಂವಿಧಾನಿಕ ಅಭಿವೃದ್ಧಿಗೆ ಕರ್ನಾಟಕ ಹೈಕೋರ್ಟ್ ಅಪಾರ ಕೊಡುಗೆ ನೀಡಿದ್ದು, ಈ ನ್ಯಾಯಪೀಠದಲ್ಲಿ ಕಾರ್ಯನಿರ್ವಹಿಸುವುದು ಹೆಮ್ಮೆಯಾಗಿದೆ ಎಂದು ತಿಳಿಸಿದರು.

ಭಾರತದ ಸಂವಿಧಾನಕ್ಕೆ ನಿಷ್ಠರಾಗಿದ್ದು, ನಮ್ಮ ಧರ್ಮ, ಕಾನೂನು, ಜನರ ನಂಬಿಕೆಯನ್ನು ಕಾಯಂಗೊಳಿಸುವುದು ನಮ್ಮ ಕರ್ತವ್ಯವಾಗಿದೆ. ವೃತ್ತಿ ಪರತೆ ಮತ್ತು ನೈತಿಕತೆಯ ದೃಷ್ಟಿಯಿಂದ ಬೆಂಗಳೂರು ವಕೀಲರ ಸಂಘಕ್ಕೆ ಗೌರವವಿದೆ. ನ್ಯಾಯಾಂಗದ ಸ್ವಾತಂತ್ರ್ಯವನ್ನು ರಕ್ಷಣೆ ಮಾಡುವುದು ಮತ್ತು ಸಂಸ್ಥೆಯನ್ನು ಭದ್ರಪಡಿಸುವ ಕೆಲಸ ಮಾಡುವುದಾಗಿ ಅವರು ಹೇಳಿದರು.

ಕರ್ನಾಟಕ ರಾಜ್ಯ ಮೇಧಾವಿಗಳು, ನ್ಯಾಯಶಾಸ್ತ್ರಜ್ಞರು, ಸುಧಾರಣಾವಾದಿಗಳ ಇತಿಹಾಸ ಹೊಂದಿದೆ. ಬಸವಣ್ಣ ಸಮ ಸಮಾಜದ ಸಮಾನತೆ, ಘನತೆ ಮತ್ತು ನೈತಿಕ ಸ್ಥೈರ್ಯದ ಕುರಿತಂತೆ ಬೋಧನೆ ಮಾಡಿದ್ದಾರೆ. ಸರ್. ಎಂ. ವಿಶ್ವೇಶ್ವರಯ್ಯ ಅವರು ಶಿಸ್ತಿನ ಪ್ರಾಮುಖ್ಯತೆ ತಿಳಿಸಿಕೊಟ್ಟಿದ್ದಾರೆ. ಡಾ. ಬಿ. ಆರ್. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಮತ್ತು ಸಾಂವಿಧಾನಿನ ಮೌಲ್ಯಗಳ ಕುರಿತ ಅವರಲ್ಲಿನ ಬದ್ಧತೆ ನಮಗೆ ದಾರಿದೀಪವಾಗಿದೆ ಎಂದರು.

ನ್ಯಾಯಮೂರ್ತಿ ಬಖ್ರು ಅವರು 1966ರಲ್ಲಿ ನಾಗ್ಪುರದಲ್ಲಿ ಜನಿಸಿದರು. ದೆಹಲಿಯಲ್ಲಿನ ದೆಹಲಿ ಪಬ್ಲಿಕ್ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದಾರೆ. 1987ರಲ್ಲಿ ದೆಹಲಿ ವಿವಿಯಿಂದ ಬಿಕಾಂ ಪದವಿ ಪಡೆದರು. ಬಳಿಕ ಇನ್ಸಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಂಯಾದಲ್ಲಿ ಚಾರ್ಟರ್ಡ್ ಅಕೌಂಟೆಂಟ್‌ನಲ್ಲಿ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದರು. 1990ರಲ್ಲಿ ಕಾನೂನು ಪದವಿ ಪಡೆದು ದೆಹಲಿಯ ಬಾರ್ ಕೌನ್ಸಿಲ್‌ನಲ್ಲಿ ವಕೀಲರಾಗಿ ಸನ್ನದು ಪಡೆದುಕೊಂಡರು. ಬಳಿಕ ದೆಹಲಿ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳಲ್ಲಿ ವಕೀಲರಾಗಿ ಸೇವೆ ಸಲ್ಲಿಸಿದರು.

2013 ರಲ್ಲಿ ದೆಹಲಿ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ, 2015ರಲ್ಲಿ ಖಾಯಂ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 2024 ರ ಡಿಸೆಂಬರ್ 5 ರಿಂದ ದೆಹಲಿ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಇದೀಗ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದಾರೆ.

ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್, ಸಭಾಪತಿ ಬಸವರಾಜ ಹೊರಟ್ಟಿ, ಕಾನೂನು ಸಚಿವ ಹೆಚ್. ಕೆ. ಪಾಟೀಲ್, ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿದ್ದ ನ್ಯಾಯಮೂರ್ತಿ ವಿ. ಕಾಮೇಶ್ವರ ರಾವ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

# ಸಿಂಧನೂರಲ್ಲಿ ಹೊಟೆಲ್ ಮಾಲೀಕರ ವಿರುದ್ಧ ಪ್ರಕರಣ ದಾಖಲು

ಜನವಾದಿ ವಾರ್ತೆ

ರಾಯಚೂರು ಜು 19 – ಜಿಲ್ಲಾ ಮಕ್ಕಳ ಸಹಾಯವಾಣಿಗೆ ಬಂದ ದೂರಿನನ್ವಯ ಜುಲೈ 18ರಂದು ಜಿಲ್ಲೆಯ ಸಿಂಧನೂರು ನಗರದ ಸಹನಾ ಆಸ್ಪತ್ರೆ ಎದುರುಗಡೆ ಇರುವ ಹೋಟೆಲ್ ಮೇಲೆ ಹಠಾತ್ ದಾಳಿ ನಡೆಸಿ ಬಾಲಕಾರ್ಮಿಕನನ್ನು ಕೆಲಸದಿಂದ ಬಿಡುಗಡೆಗೊಳಿಸಿ ಹೊಟೆಲ್ ಮಾಲೀಕರ ವಿರುದ್ಧ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ಹಾಗೂ ತಿದ್ದುಪಡಿ ಕಾಯ್ದೆ 2016ರಡಿ ಸಿಂಧನೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಬಾಲಕಾರ್ಮಿಕನ್ನು ಕೆಲಸದಿಂದ ಬಿಡುಗಡೆಗೊಳಿಸಿ 8ನೇ ತರಗತಿಗೆ ದಾಖಲು ಮಾಡಿ ಮಗುವನ್ನು ಪಾಲಕರ ವಶಕ್ಕೆ ಒಪ್ಪಿಸಲಾಗಿದೆ. ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ಮಂಜುನಾಥರೆಡ್ಡಿ, ಸಿಂಧನೂರು ಕಾರ್ಮಿಕ ನಿರೀಕ್ಷಕರಾದ ವಿಜಯಲಕ್ಷ್ಮೀ, ಸಿಂಧನೂರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಿಆರ್‌ಪಿ ಚನ್ನವೀರಗೌಡ ಅವರು ಕಾರ್ಯಾಚರಣೆಯಲ್ಲಿದ್ದರು.

ಸಾರ್ವಜನಿಕರಲ್ಲಿ ಮನವಿ: ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ 2016 ರಂತೆ 14 ವರ್ಷದೊಳಗಿನ ಮಕ್ಕಳ ದುಡಿಮೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಹಾಗೂ 15 ರಿಂದ 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಒಂದು ವೇಳೆ ದುಡಿಸಿಕೊಂಡಲ್ಲಿ 50,000 ರೂ.ದಂಡ ಹಾಗೂ 2 ವರ್ಷ ಜೈಲು ಶಿಕ್ಷೆ ಇರುತ್ತದೆ. ವಾಹನಗಳಲ್ಲಿ ಮಕ್ಕಳನ್ನು ಕೃಷಿ ಚಟುವಟಿಕೆಗಳಿಗಾಗಿ ಅಕ್ರಮ ಮತ್ತು ಕಾನೂನುಬಾಹಿರವಾಗಿ ಸಾಗಾಣಿಕೆ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದೆ. ದುಡಿಯುವ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ–1098 ಗೆ ಮಾಹಿತಿ ನೀಡಬಹುದಾಗಿದೆ ಎಂದು ಇದೆ ವೇಳೆ ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

# ಗ್ರಾಮ ಪಂಚಾಯತಿ ಮಟ್ಟದ ಪ್ರಗತಿ ಪರಿಶೀಲನೆ ಸಭೆ



ಜನವಾದಿ ವಾರ್ತೆ

ಮುದಗಲ್ ಜು 19– ಪಟ್ಟಣ ಸಮೀಪದ ನಾಗರಹಾಳ ಗ್ರಾಪಂ ಆವರಣದಲ್ಲಿ ತಾಲ್ಲೂಕ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ವೆಂಕಟೇಶ ಗುತ್ತೆದಾರ ಅಧ್ಯಕ್ಷತೆಯಲ್ಲಿ ಪ್ರಗತಿ ಪರೀಶಿಲನೆ ಸಭೆ ನಡೆಯಿತು.

ಸಭೆಯಲ್ಲಿ ಸಮಿತಿ ಅಧ್ಯಕ್ಷ ಮಾತನಾಡಿ, ಗೃಹ ಲಕ್ಷೀ ಯೋಜನೆಯಡಿಯಲ್ಲಿ ಒಟ್ಟು ನೊಂದಣೆಯಾಗಿರುವ ಫಲಾನುಭವಿಗಳು ಸಂಖ್ಯೆ 63354 ಇದ್ದು 389ತಾಂತ್ರಿಕ ದೋಷದಿಂದ ಫಲಾನುಭವಿಗಳ ಖಾತೆಗೆ ಹಣ ಜಮಾವಾಗುತ್ತಿಲ್ಲ, ಯುವ ನಿಧಿ ಯೋಜನೆ ಅಡಿಯಲ್ಲಿ ಪದವೀಧರ ಹಾಗೂ ಡಿಪ್ಲೊಮಾ ಫಲಾನುಭವಿಗಳು ಒಟ್ಟು–2985 ಇದರಲ್ಲಿ 28 ಜನರಿಗೆ ತಾಂತ್ರಿಕ ದೋಷಯಿಂದ ಹಣ ಜಮಾ ಆಗುತ್ತಿಲ್ಲ, ಅನ್ನಭಾಗ್ಯದಡಿ 10ಕೆಜಿ ಅಕ್ಕಿಯುನ್ನು ಉಚಿತ ಪಡೆದುಕೊಳ್ಳುತ್ತಿದ್ದಾರೆ. ಒಟ್ಟು–ಬಿಪಿ–ಎಲ್ ಕಾರ್ಡ 82086 ಹೊಂದಿದ್ದು ಹಾಗೂ ಅಂತ್ಯೋದಯ ಕಾರ್ಡ 9042 ಹೊಂದಿದ್ದು, ಒಟ್ಟು 3ಲಕ್ಷ 3ಸಾವಿರ 357 ಫಲಾನಾಭವಿಗಳು ಅನ್ನಬಾಗ್ಯ ಯೋಜನೆಯುನ್ನು ಪಡೆಯುತ್ತಿದ್ದಾರೆ. ಶಕ್ತಿ ಯೋಜನೆ ಅಡಿಯಲ್ಲಿ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮ ಲಿಂಗಸೂಗೂರು ಘಟಕದಿಂದ 131 ಮಾರ್ಗ ಪ್ರಾರಂಭದಲ್ಲಿ ಇವೆ ಪ್ರತಿನಿತ್ಯ 134 ಬಸ್ ವಾಹನಗಳು ಕಾರ್ಯಚರಣೆಯಲ್ಲಿವೆ. ಗೃಹಜ್ಯೋತಿ ಯೋಜನೆಯಡಿಯಲ್ಲಿ 200 ಯಿನಿಟ್ ವಿದ್ಯುತ್, ಒಟ್ಟು 38451 ನೊಂದಣಿ ಮಾಡಿರುವ ಫಲಾನಾಭವಿಗಳಿದ್ದಾರೆಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ ನ್ಯಾಮತುಲ್ಲಾ ಖಾದ್ರಿ, ಶರಣಪ್ಪ ಕಟಗಿ, ಗದ್ದೆನಗೌಡ ಪಾಟೀಲ್, ಆಸ್ಲಾಂ ಪಾಶಾ, ಆಹಾರ ಇಲಾಖೆಯ ಅಧಿಕಾರಿಗಳಾದ ಮಹಾಲಕ್ಷ್ಮಿ, ಸಾರಿಗೆ ಇಲಾಖೆಯ ಅಧಿಕಾರಿಗಳಾದ ಸಂಗಪ್ಪ ಗಡೇದ್, ಜೆಸ್ಕಾಂ ಇಲಾಖೆಯ ಎಇ. ಜಿಲ್ಲಾ ಉದ್ಯೋಗ ಅಧಿಕಾರಿಗಳು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ಜಯಶ್ರೀ, ಗ್ರಾಮ ಪಂಚಾಯತಿ ಅಧ್ಯಕ್ಷೆ ನೀಲಮ್ಮ ಮಾನಪ್ಪ ಮುಕ್ಕಣ್ಣನವರು, ನಾಗರಹಾಳ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪ್ರವೀಣ ಪಾಟೀಲ್, ಉಪಾಧ್ಯಕ್ಷ ದೇವೇಂದ್ರಪ್ಪ ಭಜಂತ್ರಿ ಇದ್ದರು.

# ಮಾಧ್ಯಮ ಅಕಾಡೆಮಿಯಿಂದ ಫೆಲೋಶಿಪ್‌ಗೆ ಅರ್ಜಿ ಆಹ್ವಾನ

ರಾಯಚೂರು ಜು 19 – ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಪತ್ರಕರ್ತರಿಗೆ ಆರು ವಿಷಯಗಳ ಕುರಿತ ಫೆಲೋಷಿಪ್‌ಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಕಾಡೆಮಿಯು ಸಾಮಾನ್ಯ ಆಯವ್ಯಯದಡಿ ಎರಡು, ಮಹಿಳಾ ಆಯವ್ಯಯದಡಿ ಎರಡು ಹಾಗೂ ಪರಿಶಿಷ್ಟ ಜಾತಿ ಉಪಯೋಜನೆಯಡಿ ಒಂದು ಹಾಗೂ ಪರಿಶಿಷ್ಟ ಪಂಗಡ ಉಪ ಯೋಜನೆಯಡಿ ಒಂದು ಫೆಲೋಷಿಪ್ ನೀಡಲಾಗುವುದು. ಫೆಲೋಷಿಪ್ ಅವಧಿ 6 ತಿಂಗಳು ಇರುತ್ತದೆ.

ಕನಿಷ್ಠ ಐದು ವರ್ಷ ಸೇವಾನುಭವ ಹೊಂದಿರುವ, ಕನಿಷ್ಠ 30 ವರ್ಷದಿಂದ 50 ವರ್ಷ ವಯೋಮಿತಿಯ ಪತ್ರಕರ್ತರು ಫೆಲೋಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಪತ್ರಕರ್ತರು ಪದವೀಧರರಾಗಿರಬೇಕು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳು ಹಾಗೂ ಉಪಗ್ರಹ ಸುದ್ದಿವಾಹಿನಿಗಳಲ್ಲಿ ಕಾರ್ಯನಿರ್ವಹಿಸುತ್ತಿರಬೇಕು. ಈ ಕುರಿತು ಸಂಪಾದಕರ ದೃಢೀಕರಣ ಪತ್ರ ಸಲ್ಲಿಸಬೇಕು.

ಫೆಲೋಷಿಪ್‌ನ ವಿಷಯಗಳು: ಬಾಲ್ಯವಿವಾಹ, ಪೋಸ್ಕೋ, ಮರ್ಯಾದೆಗೇಡು ಹತ್ಯೆ– ಮಾಧ್ಯಮ ದೃಷ್ಟಿಕೋನ, ಕೃಷಿ ಸಂವಹನ– ಒಂದು ಅಧ್ಯಯನ, ಕಲ್ಯಾಣ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಮಾಧ್ಯಮಗಳ ಪಾತ್ರ, ಬುಡಕಟ್ಟು ಕಾಯ್ದೆಗಳು ಹಾಗೂ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ– ಮಾಧ್ಯಮ ನೋಟ, Role of Media in creating awareness on cybercrime and digital safety (ಇಂಗ್ಲಿಷ್‌ನಲ್ಲಿ ಅಧ್ಯಯನ ವರದಿ ಸಲ್ಲಿಸುವುದು), ಮಾಧ್ಯಮ ಶಿಕ್ಷಣ ಮತ್ತು ವೃತ್ತಿ ನಡುವಿನ ಅಂತರ: ಕಾರಣಗಳು, ಪರಿಣಾಮ ಹಾಗೂ ಪರಿಹಾರ ಫೆಲೋಷಿಪ್ ಅವಧಿ ಆರು ತಿಂಗಳು. ಅರ್ಜಿ ಸ್ವೀಕರಿಸಲು ಆಗಸ್ಟ್ 2 ಕೊನೆಯ ದಿನವಾಗಿದ್ದು, ವಿಜೇತರ ಆಯ್ಕೆಯಲ್ಲಿ ಅಕಾಡೆಮಿಯ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಅರ್ಜಿ ನಮೂನೆಯನ್ನು ಅಕಾಡೆಮಿಯ ವೆಬ್‌ಸೈಟ್: https://mediaacademy.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಪೂರಕ ದಾಖಲೆಗಳು ಹಾಗೂ ಅಧ್ಯಯನ ಕುರಿತ ಟಿಪ್ಪಣಿಯೊಂದಿಗೆ ಕಾರ್ಯದರ್ಶಿ, ಕರ್ನಾಟಕ ಮಾಧ್ಯಮ ಅಕಾಡೆಮಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು 560001 ಇವರಿಗೆ ಕಳುಹಿಸಬಹುದು ಅಥವಾ kmafellowship2025@gmail.com ಗೆ ಇ–ಮೇಲ್ ಮೂಲಕ ಕಳಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಜನವಾದಿ ವಾರ್ತೆ

ರಾಯಚೂರು ಜು 19 – ಇಲ್ಲಿನ ತಾಲೂಕು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪಿಯುಸಿ ಮತ್ತು ಪಿ.ಯು.ಸಿ ಸಮಾನಾಂತರ ಕೋರ್ಸು ಮತ್ತು ಪದವಿ ಮಟ್ಟದ ಕೋರ್ಸುಗಳ ವಿದ್ಯಾರ್ಥಿಗಳಿಂದ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ (ಉನ್ನತ್ತಿಕರಿಸಿದ) ಬೋಳಮಾನದೊಡ್ಡಿ ರಸ್ತೆ, ರಾಯಚೂರು, ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ವಿವೇಕನಂದ ಲೇಔಟ್ ಲಯನ್ಸ್ ಶಾಲೆ ಹತ್ತಿರ ರಾಯಚೂರು (ಜಹಿರಬಾದ್), ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯ ಆಶಾಪೂರುರಸ್ತೆ ರಾಯಚೂರು, ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯ ಕೇಂದ್ರಿಯಾ ವಿದ್ಯಾಲಯ ಹತ್ತಿರ ಆಶಾಪೂರು ರಸ್ತೆ ರಾಯಚೂರು, ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ ಬೈಪಾಸ್‌ರೋಡ್ ಯರಮರಸ್ ರಾಯಚೂರು, ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ ಕೃಷಿ ವಿದ್ಯಾಲಯ ಲಿಂಗಸೂಗುರು ರೋಡ್ ರಾಯಚೂರು, ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ (ವೃತ್ತಿಪರ) ಯರಮರಸ್ ರಾಯಚೂರು, ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕೀಯರ ವಸತಿ ನಿಲಯ ಕೃಷಿ ವಿದ್ಯಾಲಯ ಲಿಂಗಸೂಗುರು ರೋಡ್ ರಾಯಚೂರು, ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ ದೇವದುರ್ಗ, ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕಿಯುರ ವಸತಿ ನಿಲಯು ದೇವದುರ್ಗದ ವಸತಿನಿಲಯಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಹತೆಗಳು: ವಿದ್ಯಾರ್ಥಿಗಳು ಸರ್ಕಾರಿಅಥವಾಅಂಗೀಕೃತ ಶಾಲಾ/ ಕಾಲೇಜುಗಳಲ್ಲಿ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ತರಗತಿಗಳಲ್ಲಿ ಆಧ್ಯಾಯನ ಮಾಡುತ್ತಿರಬೇಕು. ವಸತಿ ನಿಲಯಗಳಲ್ಲಿ ಶೇ.75 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಶೇ.25 ಇತರೆ ವರ್ಗದ ವಿದ್ಯಾರ್ಥಿಗಳಿಗೆ ಮೀಸಲಿಡಲಾಗಿದೆ.

ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು 2.50 ಲಕ್ಷ ರೂ.ಗಳಿಗಿಂತ ಮೀರಿರಬಾರದು. ಹಿಂದುಳಿದ ವರ್ಗಗಳ 2ಎ, 3ಎ, 3ಬಿ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ 2.50 ಲಕ್ಷ ರೂ.ಗಳಿಗಿಂತ ಮೀರಿರಬಾರದು. ಪ್ರವರ್ಗ–1, ಕುಟುಂಬದ ವಾರ್ಷಿಕ ವರಮಾನ 1.00 ಲಕ್ಷ ರೂ.ಗಳಿಗಿಂತ ಮೀರಿರಬಾರದು. ಅರ್ಜಿಯೊಂದಿಗೆ ತಹಸೀಲ್ದಾರರು ನೀಡಿದ ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ, ವಾಸ ಸ್ಥಳ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಅಂಕಪಟ್ಟಿ ಹಾಗೂ ವಿದ್ಯಾರ್ಥಿಯ ಪಾಸ್‌ಪೋಟೋ ಅಳತೆಯ ಇತ್ತೀಚಿನ 4 ಭಾವಚಿತ್ರಗಳೊಂದಿಗೆ ಮತ್ತು ನಿಗಧಿಪಡಿಸಿದ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು.

ಆಸಕ್ತ ಮೆಟ್ರಿಕ್ ನಂತರದ ಬಾಲಕರ ಅಥವಾ ಬಾಲಕಿಯರ ವಸತಿ ನಿಲಯಗಳ ಪ್ರವೇಶಾತಿಗಾಗಿ ಎಸ್‌ಹೆಚ್‌ಪಿ ವೆಬ್‌ಸೈಟ್ ವಿಳಾಸ: **https://shp.karnataka.gov.in** ನಲ್ಲಿ ಆಗಸ್ಟ್ 02ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಅರ್ಜಿ ಅಥವಾ ಕೋರಿಕೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರಾಯಚೂರು ಅಥವಾ ತಾಲ್ಲೂಕು ಅಲ್ಪಸಂಖ್ಯಾತರ ಅರಿವು ಮೂಡಿಸುವ ಮಾಹಿತಿ ಕೇಂದ್ರ ಹಾಗೂ ಹತ್ತಿರದ ವಸತಿ ನಿಲಯಗಳಿಗೆ ಭೇಟಿ ನೀಡಿ ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರಕಲ್ಯಾಣ ಇಲಾಖೆ ರಾಯಚೂರು ಉಪ ವಿಭಾಗದ ತಾಲ್ಲೂಕು ವಿಸ್ತರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ವಿವಿಧ ಹುದ್ದೆಗಳ ನೇಮಕಾತಿ ಅರ್ಜಿ ಆಹ್ವಾನ

ಜನವಾದಿ ವಾರ್ತೆ

ರಾಯಚೂರು ಜು 19 – ಇಲ್ಲಿನ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ವಿವಿಧ ಹುದ್ದೆಗಳನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ 67 ಶುಶ್ರೂಷಕ ಅಧಿಕಾರಿಗಳ ಹುದ್ದೆಗಳಿಗೆ ಬಿ.ಎಸ್.ಸಿ ನರ್ಸಿಂಗ್ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ. (ಬಿ.ಎಸ್.ಸಿ ನರ್ಸಿಂಗ್ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಡಿಪ್ಲೊಮಾ ಇನ್ ನರ್ಸಿಂಗ್ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು). ಸಾಮಾನ್ಯ ಅಭ್ಯರ್ಥಿಗಳಿಗೆ 40 ವರ್ಷ ಹಾಗೂ ಪ.ಜಾತಿ / ಪ.ಪಂಗಡ / ಪ್ರವರ್ಗ –1ರ ಅಭ್ಯರ್ಥಿಗಳಿಗೆ 45 ವರ್ಷ ಮತ್ತು 2ಎ / 2ಬಿ / 3ಎ / 3ಬಿಗೆ 43 ವರ್ಷ ವಯೋಮಿತಿ ನಿಗದಿಪಡಿಲಾಗಿದೆ. ಮೀಸಲಾತಿ ಕೋರುವ ಅಭ್ಯರ್ಥಿಗಳು ಅಗತ್ಯ ಜಾತಿ ಪ್ರಮಾಣ ಪತ್ರ ಲಗತ್ತಿಸುವುದು. ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ಕನಿಷ್ಟ ವೇತನವನ್ನು ನೀಡಲಾಗುವುದು. ಸಿಟಿ ಸ್ಕ್ಯಾನ್ ಮತ್ತು ಎಂ.ಆರ್.ಐ ತಂತ್ರಜ್ಞರ 04 ಹುದ್ದಗಳಿಗೆ ಬಿ.ಎಸ್.ಸಿ ಇನ್ ಮೆಡಿಕಲ್ ಇಮೇಜಿಂಗ್ ಟೆಕ್ನೋಲೋಜಿ ವಿದ್ಯಾರ್ಹತೆ ಹೊಂದಿರಬೇಕು. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 40 ವರ್ಷ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 45 ವರ್ಷವನ್ನು ನಿಗದಿಪಡಿಸಲಾಗಿದೆ. ಮೀಸಲಾತಿ ಕೋರುವ ಅಭ್ಯರ್ಥಿಗಳು ಅಗತ್ಯ ಜಾತಿ ಪ್ರಮಾಣ ಪತ್ರ ಲಗತ್ತಿಸುವುದು. 27,500 ರೂ.ಗಳ ವೇತನ ನೀಡಲಾಗುವುದು.

ಅಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಸಂಸ್ಥೆಯ ಅಂತರ್ಜಾಲ ವಿಳಾಸ: www.rimsraichur.karnataka.gov.in ದಿಂದ ಪಡೆದು ಜುಲೈ 21 ರಿಂದ ಆಗಸ್ಟ್ 04ರ ಸಂಜೆ 4 ಗಂಟೆಯೊಳಗಾಗಿ ಸ್ವ–ವಿವರ ಮತ್ತು ಅಗತ್ಯ ದಾಖಲಾತಿಗಳೊಂದಿಗೆ ಇತ್ತೀಚಿನ ಭಾವಚಿತ್ರ ಲಗತ್ತಿಸಿ ಈ ಕಚೇರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ನಿರ್ದೇಶಕರ ಕಚೇರಿ, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹೈದ್ರಾಬಾದ್ ರಸ್ತೆ, ರಾಯಚೂರು–584102 ಇಲ್ಲಿಗೆ ತಲುಪಿಸಬಹುದಾಗಿದೆ.

ನೇಮಕಾತಿ ವಿಧಾನವು ಮೆರಿಟ್ ಮತ್ತು ಮೀಸಲಾತಿ ಹಾಗೂ ಸಂದರ್ಶನದ ಮುಖಾಂತರ ಆಯ್ಕೆ ಮಾಡಲಾಗುವುದು ಎಂದು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ**

**ರಾಯಚೂರು ಜಿಲ್ಲಾ ನಗರಾಭಿವೃದ್ಧಿ ಕೋಶ ರಾಯಚೂರು ಜಿಲ್ಲೆ, ರಾಯಚೂರು**

File No.:DCRAI-PD0ENGG/174/2025-PD(UD)_RAICHUR ದಿನಾಂಕ: 18.07.2025.

**ಟೆಂಡರ್ ಪ್ರಕಟಣೆ**

ರಾಯಚೂರು ಜಿಲ್ಲೆಯ, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹಾಲಿ ಇರುವ ಸಾಂಪ್ರದಾಯಿಕ ಬೀದಿ ದೀಪಗಳನ್ನು ಬದಲಿಸಿ ಇಂಧನ ಕ್ಷಮತೆಯ LED ಬೀದಿ ದೀಪಗಳನ್ನು ಕೇಂದ್ರೀಕೃತ ಚಾಲನೆ ಮತ್ತು ನಿರ್ವಹಣೆ (CCMS) ಯೊಂದಿಗೆ ಅಳವಡಿಸುವ ಕಾಮಗಾರಿಗೆ ಸಂಬಂಧಿಸಿದಂತೆ, Transaction Advisor for Preparation of the DPR Implementation of Energy Efficiency. Projects for Street lighy by replacement of Existing conventional lamps with LED lamps along with CCMS in Urban Local Bodies. Of Raichur District"

ರವರನ್ನು ಆಯ್ಕೆ ಮಾಡುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ವೇದಿಕೆ (ಕೆಪಿಪಿಪಿ) https://kppp.karnataka.gov.in. ಯ ಮೂಲಕ ಆನ್ ಲೈನ್ ಟೆಂಡರ್ ಅನ್ನು ಅಹ್ವಾನಿಸಲಾಗಿದ್ದು, ಟೆಂಡರ್‌ಗಳನ್ನು ಕೆಪಿಪಿಪಿಯ ಮೂಲಕ ಟೆಂಡರ್ ಸಂಖ್ಯೆ:DMA/2025-26/OW/WORK_INDENT45475 ಕೆಪಿಪಿಪಿಯಲ್ಲಿ ಟೆಂಡರ್ ಅನ್ನು ಅಪ್ ಲೋಡ್ ಮಾಡುವುದು ವಿವರವಾದ ಟೆಂಡರ್ ಪ್ರಕಟಣೆಯನ್ನು ವೆಬ್ ಸೈಟ್ www.raichurdudc.mrc.gov.in. ನಲ್ಲಿ ವಿಕ್ಷೀಸಬಹುದಾಗಿದೆ.

ಸಹಿ/– ಯೋಜನಾ ನಿರ್ದೇಶಕರು

ಜಿಲ್ಲಾ ನಗರಾಭಿವೃದ್ಧಿ ಕೋಶ ರಾಯಚೂರು

DIP/RCR/263/KSMCA/264/2024-25

# ಸೋರುತ್ತಿರುವ ನಾಡ ಕಾರ್ಯಲಯ -ತೊಂದರೆ





**ಜನವಾದಿ ವಾರ್ತೆ**

ಮುದಗಲ್ ಜು 19- ಮಳೆ ಬಂದರೆ ಸಾಕು ಪಟ್ಟಣದ ನಾಡ ಕಾರ್ಯಲಯ ಸೋರುತ್ತಿರುವ ಹಿನ್ನಲೆಯಲ್ಲಿ ಸಿಬ್ಬಂದಿಗಳು ಕೆಲಸ ಮಾಡಲು ಹರಸಾಹಸ ಪಡುವಂತಾಗಿದೆ.

ನಾಡ ಕಾರ್ಯಲಯದ ಕಚೇರಿ ಕಟ್ಟಡ ಸಂಪೂರ್ಣ ಶೀತಲಗೊಂಡು ಹಾಗೂ ಮೇಲ್ಛಾವಣಿ ಹಾಗೂ ಸುತ್ತಮುತ್ತ ಗೋಡೆ ಬಿರುಕುಬಿಟ್ಟ ಕಾರಣ ಮಳೆ ಬಂದರೆ ಸಾಕು ಸೋರುತ್ತಿದೆ ಮಳೆಯಿಂದ ಕಾರ್ಯಲಯದ ಮುಂದೆ ಹಾಗೂ ಒಳಗಡೆ ನೀರು ನಿಲ್ಲುತ್ತವೆ ಇದರ ಸ್ವಚ್ಛತೆ ಮಾಡಲು ಸಿಬ್ಬಂದಿ ಹರಸಾಸಪಡುವಂತಾಗಿದೆ ಹಾಗೂ ಉಪತಹಶೀಲ್ದಾರ, ಕಂದಾಯ ನಿರೀಕ್ಷಕ ಹಾಗೂ ಏಳು ಜನ ಗ್ರಾಮ ಆಡಳಿತಾಧಿಕಾರಿಗಳು ಮತ್ತು 9 ಜನ ಗ್ರಾಮ ಸಹಾಯಕರು ಜೀವ ಭಯದಲ್ಲಿ ಕೆಲಸ ಮಾಡುವಂತ ಪರಸ್ಥಿತಿ ನಿರ್ಮಾಣವಾಗಿದೆ ಮತ್ತು ಸರಕಾರದ ಅನೇಕ ಪ್ರಮಾಣ ಪತ್ರಗಳನ್ನು ಪಡೆಯಲು ಕಚೇರಿಗೆ ಬರುವ 52 ಗ್ರಾಮಗಳ ಸಾರ್ವಜನಿಕರು ಹಾಗೂ ರೈತರು ಕೂಡ ಕುಳಿತುಕೊಳ್ಳಲು ಆಸನವಿಲದೆ ಹಾಗೂ ಜೀವನನ್ನು ಕೈಯುಲ್ಲಿಡಿದುಕೊಂಡು ಕೆಲಸ ಮಾಡಿಕೊಂಡು ಹೋಗುವಂತಾಗಿದೆ ಮಳೆಯಿಂದ ಸೋರಿ ಕಚೇರಿಯ ಅನೇಕ ಕಾಗದ ಪತ್ರಗಳು ಕೂಡ ಹಾಳಾಗುತ್ತಿವೆ ಇದರಿಂದ ಕಚೇರಿಯ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ ಮತ್ತು ಅರ್ಜಿ ಹಾಕಲು ಬರುವ ಸಾರ್ವಜನಿಕರಿಗೆ ನಿಲ್ಲಲು ಸ್ಥಳವಿಲದೆ ಮಳೆ ಗಾಳಿ ಉರಿಬಿಸಿಲನ್ನು ಲೆಕ್ಕಿಸದೆ ಅರ್ಜಿ ಹಾಕಬೇಕಾಗಿದೆ ಎಂದು ಸಾರ್ವಜನಿಕರು ದೂರಿದರು.

ಕೋಟೆ ಹತ್ತಿರ ಇದ್ದ ನಾಡ ಕಚೇರಿಯ ಹಳೆ ಕಟ್ಟಡ ಶಿಥಿಲಗೊಂಡಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ನೆಲಸಮ ಮಾಡಿ ಸುಮಾರು ವರ್ಷಗಳು ಕಳೆದಿವೆ ಆದರೆ ನೂತನ ಕಟ್ಟಡ ನಿರ್ಮಾಣ ಮಾಡಲು ಸರಕಾರದಿಂದ ಅನುದಾನ ಬಾರದ ಕಾರಣ ಈ ಕಾಮಗಾರಿ ಇನ್ನು ಪ್ರಾರಂಭವಾಗಿರುವುದಿಲ್ಲ.

ಈಗಲಾದರೂ ಸಂಬಂಧಪಟ್ಟ ಜನಪ್ರತಿನಿಧಿಗಳು ಹಾಗೂ ಕಂದಾಯ ಇಲಾಖೆಯು ಅಧಿಕಾರಿಗಳು ಎಚ್ಚೆತ್ತುಕೊಂಡು ನಾಡ ಕಾರ್ಯಲಯದ ಹೊಸ ಕಟ್ಟಡ ನಿರ್ಮಾಣ ಮಾಡಿ ನಾಡ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ಹಾಗೂ ರೈತರಿಗೆ ಅನುಕೂಲ ಮಾಡಿಕೊಡುತ್ತಾರೆ ಕಾದು ನೋಡಬೇಕು.

- ಜೀವ ಭಯದಲ್ಲಿ ಅಧಿಕಾರಿಗಳು ಕೆಲಸ
- ಮಳೆ ಬಂದರೆ ಸೋರುತ್ತಿರುವ ನಾಡ ಕಚೇರಿ ಕಾರ್ಯಲಯ
- ಸಾರ್ವಜನಿಕರಿಗೆ ಹಾಗೂ ರೈತರಿಗೆ ತೊಂದರೆ.
- ಚುನಾಯಿತ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ
- ಬಾರದ ಅನುದಾನ ಕಟ್ಟಡ ಕಾಮಗಾರಿ ವಿಳಂಬ

" ಈ ಕೂಡಲೆ ರಾಜ್ಯ ಸರಕಾರ ಹಾಗೂ ಕಂದಾಯ ಸಚಿವರು ಮುದಗಲ್ ಪಟ್ಟಣದ ನಾಡ ಕಚೇರಿ ನಿರ್ಮಾಣ ಮಾಡಲು ನೀಡಿ ಅನುದಾನ ನೀಡಿ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು. "

**- ಬಸವರಾಜ ಮಾಕಾಪೂರು,**
ತಾಲೂಕಾಧ್ಯಕ್ಷರು ಜೆಡಿಎಸ್ ಘಟಕ, ಲಿಂಗಸುಗೂರು

# ರಾಯಚೂರು ಮಹಾನಗರ ಪಾಲಿಕೆಯಿಂದ ವಿವಿಧ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಜನವಾದಿ ವಾರ್ತೆ**

ರಾಯಚೂರು ಜು 19 - ಇಲ್ಲಿನ ರಾಯಚೂರು ಮಹಾನಗರ ಪಾಲಿಕೆಯಿಂದ 2025-26ನೇ ಸಾಲಿನ ಎಸ್.ಎಫ್.ಸಿ ಅನುದಾನದಲ್ಲಿ ಶೇ.7.25 ಇತರೆ ಹಿಂದುಳಿದ ಜನಾಂಗದ ಮತ್ತು ಶೇ.5 ವಿಕಲಚೇತನರ ವೈಯಕ್ತಿಕ ಸಂಬಂಧಿತ ಕಲ್ಯಾಣ ಕಾರ್ಯಕ್ರಮದಲ್ಲಿ ಪಾಲಿಕೆ ವ್ಯಾಪ್ತಿ ಪ್ರದೇಶದ ಅರ್ಹ ಫಲಾನುಭವಿಗಳಿಂದ ವಿವಿಧ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಕಾರ್ಯಚಟುವಟಿಕೆಯಡಿ ಶೇ.7.25ರ ಇತರೆ ಹಿಂದುಳಿದ ಜನಾಂಗದ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕಾಗಿ 1.85 ಲಕ್ಷ ರೂ. ಗಳನ್ನು ಅಂದಾಜು ಮೊತ್ತ ಕಾಯ್ದಿ-ರಿಸಲಾಗಿದೆ. ಶೇ.5ರಡಿ ಪರಿಶಿಷ್ಟ ಜಾತಿಯ ವಿಕಲಚೇತನರ ಮನೆಯ ಮೇಲ್ಛಾವಣಿ ದುರಸ್ತಿ ಸಾಮಗ್ರಿಗಳು ಅಥವಾ ಅವಶ್ಯಕ ಸಾಮಗ್ರಿಗಳನ್ನು ಖರೀದಿಸಲು 40000 ರೂ.ಗಳನ್ನು ಒಂದು ಬಾರಿ ಒಟ್ಟು 18 ಅಭ್ಯರ್ಥಿಗಳಿಗೆ ಧನಸಹಾಯ ನೀಡಲಾಗುವುದು.

ದಾಖಲಾತಿಗಳು: ನಿಗದಿತ ನಮೂನೆಯಲ್ಲಿ ಅರ್ಜಿ, ದೃಢೀಕೃತ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಪ್ರಸಕ್ತ ಚಾಲ್ತಿ ಸಾಲು), ದೃಢೀಕೃತ ವಾಸಸ್ಥಳಕ್ಕೆ ಗುರುತಿನ ಚೀಟಿ/ರೇಷನ್ ಕಾರ್ಡ, ಪಾಸ್ ಪೋಟೋ ಅಳತೆಯ ಭಾವ ಚಿತ್ರ-2, ಬ್ಯಾಂಕ್ ಪಾಸ್ ಪುಸ್ತಕ ಹಾಗು ಐ.ಎಫ್.ಎಸ್.ಸಿ ಕೋಡ್‌ನೊಂದಿಗೆ ಬ್ಯಾಂಕ್ ವಿವರ, ವೈದ್ಯರಿಂದ ಪಡೆದ ಗುರುತಿನ ಚೀಟಿ/ಯು.ಡಿ.ಎ. ಕಾರ್ಡ, ಮನೆಯ ಮೇಲ್ಛಾವಣಿ ಛಾಯಾ ಚಿತ್ರ./ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಜಾಗದ ಛಾಯಾಚಿತ್ರ, ಮೊಬೈಲ್ ನಂಬರ್‌ನೊಂದಿಗೆ ಜುಲೈ 31ರ ಸಂಜೆ 5ಗಂಟೆಯೊಳಗಾಗಿ ಅಗತ್ಯ ದಾಖಲಾತಿಗಳು ಕಡ್ಡಾಯವಾಗಿ ನಿಗದಿತ ದಿನಾಂಕ ಒಳಗಡೆ ಸಲ್ಲಿಸಬಹುದಾಗಿದೆ. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಲ್ಲದೆ ಸರಿಯಾದ ದಾಖಲಾತಿಗಳು ಸಲ್ಲಿಸದೇ ಇದ್ದ ಪಕ್ಷದಲ್ಲಿ ತಮಗೆ ಯಾವುದೇ ಹಿಂಬರಹ ಕಳುಹಿಸದೇ ನೇರವಾಗಿ ವಿಭಾಗದ ಸಿಬ್ಬಂದಿಯವರು ತಿರಸ್ಕೃತ ಮಾಡಲಾಗುವುದು ಎಂದು ರಾಯಚೂರು ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕವಿತಾಳ: ಪ.ಪಂ. ಸಾಮಾನ್ಯ ಸಭೆ ವಿವಿಧ ಯೋಜನೆಗಳ ಕುರಿತು ಚರ್ಚೆ

**ಜನವಾದಿ ವಾರ್ತೆ**



ಕವಿತಾಳ ಜು 19- ಇಲ್ಲಿನ ಪಟ್ಟಣ ಪಂಚಾಯತಿಯಲ್ಲಿ ಪಟ್ಟಣದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ಹಾಗೂ ಅನುಮೋದನೆ ನೀಡಲು ಸರ್ವ ಸದಸ್ಯರ ಸಾಮಾನ್ಯ ಸಭೆ ಕರೆಯಲಾಗಿತ್ತು.

ಪ. ಪಂ.ಅಧ್ಯಕ್ಷೆ ಕಾಸೀಂ ಬೀ ಚಾಂದಪಾಶಾ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಕುಡಿಯುವ ನೀರಿನ ಕೆರೆಗೆ ಶಾಶ್ವತ ವಿದ್ಯುತ್ ಸಂಪರ್ಕ ಒದಗಿಸುವುದು, ಸ್ಥಾಯಿ ಸಮಿತಿ ರಚನೆ, ಹೈಟೆಕ್ ಶೌಚಾಲಯಗಳ ಬಳಕೆಗೆ ಅಗತ್ಯ ದುರಸ್ತಿ ಮಾಡುವುದು, ಹಳೇ ಬಸ ನಿಲ್ದಾಣದ ಹತ್ತಿರ ಸಾರ್ವಜನಿಕ ಶೌಚಾಲಯ ನಿರ್ಮಿಸುವುದು, ಮುಖ್ಯ ರಸ್ತೆ ಬದಿಯ ಶಾಲಾ ಕಾಂಪೌಂಡ್ ಗೋಡೆ ಹಾಗೂ ಪಾದಾಚಾರಿ ರಸ್ತೆಯನ್ನು ಅತಿಕ್ರಮಿಸಿದ ಡಬ್ಬಾ ಅಂಗಡಿಗಳನ್ನು ತೆರವುಗೊಳಿಸುವುದು, ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಶೌಚಾಲಯ ನಿರ್ಮಾಣ, ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ನೆರವು ನೀಡುವುದು ಸೇರಿದಂತೆ ವಿವಿಧ ಅಭಿವೃದ್ಧಿ ವಿಷಯಗಳ ಕುರಿತು ಚರ್ಚಿಸಲಾಯಿತು.

ಸದಸ್ಯ ರಮೇಶ ನಗನೂರು ಮಾತನಾಡಿ ಕಸ ವಿಲೇವಾರಿ ವಾಹನ ಕಳುವಾಗಿ ವಾರ ಕಳೆದರೂ ಇದುವರೆಗೆ ಯಾವುದೆ ಕ್ರಮ ಕೈಗೊಂಡಿಲ್ಲ ಸರಕಾರಿ ವಾಹನ ಕಳ್ಳತನವಾಗುವುದು ಗಂಭೀರವಾಗಿ ಪರಿಗಣಿಸಿ ಆರೋಪಿಗಳನ್ನು ಪತ್ತೆ ಹಚ್ಚಬೇಕು ಎಂದು ಒತ್ತಾಯಿಸಿದರು.

ಸದಸ್ಯ ರುಕ್ಮದ್ದೀನ್ ಮಾತನಾಡಿ ಮಾಂಸ ಮಾರಾಟ ಮಳಿಗೆಗಳಿಗೆ ಸೂಕ್ತ ಜಾಗವನ್ನು ನಿಗದಿಪಡಿಸಿ ಬಾಡಿಗೆಯನ್ನು ನಿಗದಿ ಮಾಡುವಂತೆ ಮನವಿ ಮಾಡಿದರು.ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಿ ಗ್ರೂಪ್ ಸಿಬ್ಬಂದಿಗಳ 8 ತಿಂಗಳ ಬಾಕಿ ವೇತನ ಪಾವತಿಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಪ. ಪಂ.ಮುಖ್ಯಾಧಿಕಾರಿ ಹನುಮಂತಮ್ಮ, ಉಪಾಧ್ಯಕ್ಷೆ ಎಲಿಜಾ ಓವಣ್ಣ, ಸದಸ್ಯರಾದ ಗೌರಮ್ಮ, ಅಂಬಮ್ಮ, ಹುಲುಗಮ್ಮ, ರಾಜೇಶ್ವರಿ, ಮಲ್ಲಿಕಾರ್ಜುನ ಗೌಡ, ಯಲ್ಲಪ್ಪ ಮಾಡಗಿರಿ, ಅಮರೇಶ ಕಟ್ಟಿಮನಿ, ಲಾಳೇಶ ನಾಯಕ,ಎಂ. ರಾಘವೇಂದ್ರ ಶೆಟ್ಟಿ, ಲಿಂಗರಾಜ ಕಂದಗಲ್, ಹುಲಗಪ್ಪ ಸೇರಿದಂತೆ ಪ. ಪಂ ಸಿಬ್ಬಂದಿಗಳು ಇದ್ದರು.

# ಇ-ಕೈವೈಸಿ ಮಾಡಿಸಲು ಪಡಿತರ ಚೀಟಿದಾರರಿಗೆ ಸೂಚನೆ

ಮೈಸೂರು ಜು 19- ರಾಜ್ಯದಲ್ಲಿ ಈ ಕೈವೈಸಿ ಆಗದೇ ಇರುವ ಪಡಿತರ ಚೀಟಿದಾರರ ಈ ಕೈವೈಸಿಯನ್ನು ಆದಷ್ಟು ಬೇಗ ಮಾಡಿಸಬೇಕು ಎಂದು ಆಹಾರ ನಾಗರಿಕ ಸರಬರಾಜು ಇಲಾಖೆ, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನ ಶಾಸ್ತ್ರ ಇಲಾಖೆಯ ಸಚಿವರಾದ ಕೆ ಹೆಚ್ ಮುನಿಯಪ್ಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮಿಕೊಂಡಿದ್ದ ಮೈಸೂರು ವಿಭಾಗ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಕೈವೈಸಿ ಆಗದೇ ಇರುವ ಪಡಿತರ ದಾರರ ಈ ಕೈವೈಸಿ ಆದಷ್ಟು ಬೇಗ ಮಾಡಿಸಿ. ಈ ಕೈವೈಸಿ ಮಾಡಿಸದ ಸದಸ್ಯರ ಈ ಕೈವೈಸಿ ಮಾಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಿ ಎಂದು ಸೂಚನೆ ನೀಡಿದರು.

ಈ ಕೈವೈಸಿ ಮಾಡಿಸದ ಸದಸ್ಯ-ರಿಗೆ ಮುಂದಿನ ಒಂದು ತಿಂಗಳ ಅವಕಾಶ ನೀಡಿ, ಆಗಲೂ ಈ ಕೈವೈಸಿ ಮಾಡಿಸದೆ ಇದ್ದರೆ ಅಂತಹ ಸದಸ್ಯರ ಪಡಿತರ ನಿಲ್ಲಿಸುವುದಾಗಿ ಕಾರ್ಡ್‌ದಾರರಿಗೆ ಎಚ್ಚರಿಕೆ ನೀಡಬೇಕು. ಅನಗತ್ಯವಾಗಿ ಕಾರ್ಡ್‌ಗಳು ವಿತರಣೆ ಆದರೆ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ ಜಾಗೃತಿ ಸಮಿತಿಗಳನ್ನು ರಚನೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾನೂನು ಮಾಪನ ಶಾಸ್ತ್ರ ಇಲಾಖೆಗೆ ಬೇಕಿರುವ ವಾಹನ ಸೌಲಭ್ಯ ಹಾಗೂ ಕಾನೂನು ಮಾಪನ ನಿರೀಕ್ಷಕರ ಹುದ್ದೆಟಿಜಜ-ಜಿಟಿಜಜಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು. ಆಹಾರ ಧಾನ್ಯಗಳು ಗೋದಾಮುಗಳಲ್ಲಿ ಹಾಳಾಗದಂತೆ ನೋಡಿಕೊಳ್ಳಿ. ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ಖರೀದಿಸುವ ಆಹಾರ ಧಾನ್ಯಗಳನ್ನು ಸುರಕ್ಷಿತವಾಗಿ ಸಂರಕ್ಷಣೆ ಮಾಡಬೇಕು ಎಂದು ಸೂಚನೆ ನೀಡಿದರು.

ಆಹಾರ ಸರಬರಾಜು, ಆಹಾರ ಗ್ರಾಹಕ ವ್ಯವಹಾರಗಳ ಇಲಾಖೆ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಯೋಜನಾ ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಇಲಾಖೆಯ ಕಾರ್ಯದರ್ಶಿಗಳಾದ ಮನೋಜ್ ಜೈನ್ ಅವರು ಮಾತನಾಡಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಇಲಾಖೆಯ ಇತರ ಅಧಿಕಾರಿಗಳಿಗೆ ಹೆಚ್ಚುವರಿ ಪ್ರಭಾರ ನೀಡಿ, ಖಾಲಿ ಇರುವ ಆಹಾರ ನಿರೀಕ್ಷಕರ ಹುದ್ದೆಗಳಿಗೆ ಕಂದಾಯ ಇಲಾಖೆಯ ಕಂದಾಯ ನಿರೀಕ್ಷಕರಿಗೆ ಪ್ರಭಾರ ನೀಡುವಂತೆ ಸೂಚನೆ ನೀಡಿದರು.

ಬೇರೆ ರಾಜ್ಯದ ಜನರು ಇದ್ದರೆ ಅವರ ಆಧಾರ್ ಕಾರ್ಡ್ ಪರಿಶೀಲಿಸಿ, ಚಾಮರಾಜನಗರ ಜಿಲ್ಲೆಯಲ್ಲಿ ಗುಡ್ಡ ಪ್ರದೇಶಗಳಲ್ಲಿ 10 ರಿಂದ 15 ಮನೆಗಳು ಇರುವ ಕಡೆಗೆ ಅಲ್ಲಿಗೆ ಪಡಿತರ ತಲುಪಿಸಬೇಕು ಎಂದರು.ಈ ಕೈವೈಸಿ ಮಾಡಿಸದ ಸದಸ್ಯರ ಆಹಾರ ಪದಾರ್ಥಗಳನ್ನು ನಿಲ್ಲಿಸಲಾಗುವುದು ಎಂದು ರೇಷನ್ ಅಂಗಡಿಯವರ ಮೂಲಕ ಮಾಹಿತಿ ನೀಡಬೇಕು. ಮಾಹಿತಿ ನೀಡಿದ್ದಕ್ಕೆ ಸದಸ್ಯರಿಂದ ಸಹಿ ಪಡೆಯಬೇಕು ಎಂದು ತಿಳಿಸಿದರು.

ಆಹಾರ ಮತ್ತು ನಾಗ-ರಿಕ ಸರಬರಾಜು ಇಲಾಖೆಯ ಆಯುಕ್ತರಾದ ವಾಸಿರೆಡ್ಡಿ ವಿಜಯ್ ಜ್ಯೋತ್ಸ್ನಾ ಮಾತನಾಡಿ, ಇದುವರೆಗೆ 1.69 ಲಕ್ಷ ಜನರು ಈ ಕೈವೈಸಿ ಮಾಡಿಸಿಲ್ಲ. ಸಿಂಗಲ್ ಮೆಂಬರ್ ಕಾರ್ಡ್ ಗಳಿಗೆ ಈ ಕೈವೈಸಿ ಮಾಡಿಸಲು ಸ್ವಲ್ಪ ಅವಕಾಶ ನೀಡಬೇಕು. 4 ರಿಂದ 5 ಜನರಿರುವ ಕಾರ್ಡ್‌ಗಳ ಸದಸ್ಯರು ಈ ಕೈವೈಸಿ ಮಾಡಿಸದೆ ಇದ್ದರೆ ಈ ಕೈವೈಸಿ ಮಾಡಿಸದ ಸದಸ್ಯರ ಪಡಿತರ ನಿಲ್ಲಿಸಬಹುದಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಕಾನೂನು ಮಾಪನ ಶಾಸ್ತ್ರ ಇಲಾಖೆಯ ನಿಯಂತ್ರಕರಾದ ಎಂ ಎಸ್ ಎನ್ ಬಾಬು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಆಯುಕ್ತರಾದ ಜಗದೀಶ್ ಎಂ ಕೆ ಸೇರಿದಂತೆ ಇಲಾಖೆಗಳ ಅಧಿಕಾ-ರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅಜ್ಜಿಯರೆಂಬ ವಿಸ್ಮಯ ಜೀವಿಗಳು



ಅಲ್ಲಿನ ಸಾಧುಗಳ ನಡುವೆ ಸಣ್ಣಗೆ, ತೆಳ್ಳಗಿನ, ಬಿಳಿ ಬಣ್ಣದ ಅರವತ್ತರ ಸುಮಾರಿನ ಕಾವಿ ಸೀರೆ ಉಟ್ಟು ವಿಭೂತಿ, ಜಪಮಾಲೆ ಧರಿಸಿದ ಮತ್ತೊಂದು ಅಜ್ಜಿ ಕುರ್ಚಿಯ ಮೇಲೆ ಕುಳಿತಿದ್ದರು. "ನೋಡೊ ನೋಡೋ ಅವಳೇ ನನಗೆ ಮೋಸ ಮಾಡಿದ್ದು, ಪುಟ್ಟೀರಮ್ಮ ಅಂತಾ" ಅಂದಳು. ಅವರನ್ನು ಮತ್ತೆ ನೋಡಿದೆ, ನಿರಾಳವಾದ ಪ್ರಶಾಂತ ಮುಖ, ಅವರ ಮಾತು, ವಿನಯ ನೋಡಿ ಅವರೊಬ್ಬ ನಿಜಕ್ಕೂ ಸಾಧುವಿರಬೇಕು ಎನಿಸಿತು. ಮತ್ತೆ ಅವರ್ಯಾಕೆ ಈರಮ್ಮಜ್ಜಿಯನ್ನು ಆಶ್ರಮದಿಂದ ಹೊರ ಹಾಕಿರಬಹುದು ಎನ್ನುವ ಪ್ರಶ್ನೆಗಳು ಮೂಡತೊಡಗಿದವು.

ಆ ನಡುರಾತ್ರಿಯಲ್ಲಿ ಹೊತ್ತು ಹೊರೆದು, ನನ್ನ ಸಾಕಿ ಸಲಹಿ ಸವೆದು ಹೋಗಿದ್ದ ಹಳ್ಳಿಯಲ್ಲಿದ್ದ ಇಬ್ಬರು ಅಜ್ಜಿಯರ ನೆನಪುಗಳು ಮತ್ತೆ ಮತ್ತೆ ಕಾಡ ತೊಡಗಿದವು. ಮುಂಗಾರಿಗೆ ಹೊಲದ ಬಿತ್ತನೆ, ಕಳೆ, ಒಕ್ಕಣೆ, ಮನೆಯ ಕಸ ಮುಸುರೆ ತಿಕ್ಕಿ ಸ್ವಚ್ಛ ಮಾಡುವ, ಹಸು, ಕರುಗಳಿಗೆ ಆರೈಕೆ, ಹಾಲು ಹಿಂಡಿ, ಮೊಸರು, ಮಜ್ಜಿಗೆ, ಬೆಣ್ಣೆ ಮಾರಿ ಮನೆ ವಾರ್ತೆಗೆ ಸದಾ ನೊಗ ಎಳೆಯುವ ಜೀವಗಳು, ಹತ್ತಾರು ಕೆಲಸದ ಆಳುಗಳಿಗೆ ಹೊತ್ತು ಹೊತ್ತಿಗೆ ಊಟ, ಒಂದಾ ಎರಡಾ ಕೆಲಸಗಳು! ಎಂದಿಗೂ ಸುಸ್ತಾಗಿ ಉಸ್ಸೆಂದು ಮಲಗದ ಅವರು ಜಗತ್ತಿನ ವಿಸ್ಮಯ ಜೀವಿಗಳು.

ಸದಾ ಕೋರ್ಟು ಕಚೇರಿ ಸುತ್ತುವ ಗಂಡನ ಜೊತೆ ಏಗುತ್ತಾ, ನಾಲ್ಕು ಮದ್ವೆ, ಹತ್ತಾರು ಮೊಮ್ಮಕ್ಕಳ ಬಾಣಂತನದ ಖರ್ಚು ನಿಭಾಯಿಸಿದ್ದ ಅಮ್ಮನ ಅಮ್ಮ. ಮತ್ತೆ ಗಂಡನ ಆರ್ಭಟಕ್ಕೆ ಹೆದರುತ್ತಿದ್ದ ನನ್ನ ಅಪ್ಪನ ಅಮ್ಮ ಬೆಳಗಿನ ಜಾವ ಐದಕ್ಕೆ ಹಾಲು ನಿದ್ದೆಯಲ್ಲಿದ್ದ ಎಂಟರ ವಯಸ್ಸಿನ ನನ್ನನ್ನು ಎಬ್ಬಿಸಿ, ಊರಾಚಿನ ಹೊಲದಲ್ಲಿದ್ದ ಹಿಪ್ಪೆ ಬೀಜ ಆರಿಸಲು ಕರೆದೊಯ್ಯುತ್ತಿದ್ದು ನೆನೆದು ಮತ್ತೆ ಮನ ಜುಂ ಎನಿಸಿತು. ಇನ್ನೂ ಸೂರ್ಯ ಮೂಡದ, ನಡುಕ ಹುಟ್ಟಿಸುವ ಚಳಿಯಲ್ಲಿ ಆ ಹೊತ್ತಿನಲ್ಲಿ ಆ ಎರಡು ಬೃಹದಾಕಾರದ ಹಿಪ್ಪೆ ಮರದ ಬಳಿ ಲಾಟೀನು ಹಿಡಿದು ಮರದ ಕೆಳಗೆಲ್ಲಾ ನೂರೆಂಟು ಬಾವಲಿಗಳು ತಿಂದು ಬಿಸಾಡಿದ ಹಿಪ್ಪೆ ಬೀಜಗಳನ್ನು ಆಯ್ದು ಬುಟ್ಟಿಗೆ ತುಂಬಿ ಮನೆಗೆ ಹೊತ್ತು ಚೀಲಗಟ್ಟಲೇ ಬೀಜ ಕೂಡಿಡುತ್ತಿದ್ದೆವು. ಅದನ್ನು ಸಾಬರಿಗೆ ಮಾರುತ್ತಿದ್ದ ಅಜ್ಜ ಖುಷಿಗಾಗಿ ಒಂದು ಜೊತೆ ಬಟ್ಟೆ ಕೊಡಿಸುತ್ತಿದ್ದ. ಬೆಳಿಗ್ಗೆ ಎದ್ದಾಗ ಮೆಟ್ಟಿಲು ಕೆಳಗೆ ಮಲಗಿದ್ದ ಅಜ್ಜಿ ತುಸು ಹರ್ಷವಾಗಿದ್ದಳು, ಅಲ್ಲಿಯೇ ಸೂಯೆಜ್ ಫಾರಂ ಬಳಿ ಇದ್ದ ವಿನಯ್ ಟಿಫಾನೀಸ್ ಗೆ ಹೋಗಿ ಎರಡು ಇಡ್ಲಿ ಪಾರ್ಸಲ್ ತಂದು ಕೊಟ್ಟು ತಿನ್ನುವಂತೆ ಹೇಳಿ ಕಾಲೇಜಿಗೆ ಹೊರಟೆ. ಹೀಗೆಯೇ ನಾಲ್ಕೈದು ದಿನ ಕಳೆದಿರಬೇಕು. ಒಂದು ಸಂಜೆ ಬಂದು ನೋಡಿದಾಗ ಮೆಟ್ಟಿಲ ಕೆಳಗೆ ಒಂದು ಸೀಮೆ ಎಣ್ಣೆ ಸ್ಟೌ, ಎರಡು ಪಾತ್ರೆ, ತಟ್ಟೆ, ಲೋಟ ಕಾಣಿಸಿದವು. ಏನಜ್ಜಿ! ಏನೋ ಅಡುಗೆ ಮಾಡಲು ರೆಡಿ ಮಾಡ್ತಾ ಇದ್ದೀಯಾ ಎಂದು ಕೇಳಿದೆ. ಹೂ ಕಣೋ! ನೋಡು ಆ ಮನೆಯ ಇನ್ಸ್ ಪೆಕ್ಟರ್ ಪರಶಿವಪ್ಪ ನನ್ನ ಕಷ್ಟ ಕೇಳಿ ಇವೆಲ್ಲಾ ಕೊಡಿಸಿದರು. ನಾಳೆಯಿಂದ ಇಲ್ಲಿಯೇ ಅನ್ನ, ಸಾರು ಮಾಡಿಕೊಳ್ಳುತ್ತೇನೆ ಎಂದಳು. ಜೊತೆಗೆ ಅಕ್ಕಿ, ತರಕಾರಿ ಎಲ್ಲವೂ ಇತ್ತು. ನಿಜಕ್ಕೂ ಮರುದಿನ ಬೆಳ್ಳಿಗ್ಗೆ ಅನ್ನ ಮಾಡಿ, ಘಮ ಘಮ ಟೋಮಾಟೋ ಗೊಜ್ಜು ಮಾಡಿಟ್ಟಿದ್ದಳು. "ಏನಜ್ಜಿ ಅಡುಗೆ ರೆಡಿನಾ " ಎಂದೆ. "ಹುಂ ಬಾರಲೇ ಕಂದಾ ಊಟ ಮಾಡುವಿಯಂತೆ", ಬೇಡಜ್ಜಿ ಎನ್ನುತ್ತಿದ್ದಂತೆ, "ಯಾಕೋ ಬೇಡ ಅಂತೀಯಾ ನಾನು ಮಾಂಸ ಮಡ್ಡಿ ತಿನ್ನುವುದಿಲ್ಲ, ದೀಕ್ಷೆ ತಗೊಂಡಿದೀನಿ" ಎಂದು ತನ್ನ ಕತ್ತಿನಲ್ಲಿದ್ದ ದಪ್ಪನೆಯ ರುದ್ರಾಕ್ಷಿ ಸರ ತೋರಿಸುತ್ತಾ ಊಟ ಮಾಡಲು ಒತ್ತಾಯಿಸತೊಡಗಿದಳು. ಇಲ್ಲ, ಅಜ್ಜಿ ಹಾಗೇನಿಲ್ಲ ನಿನಗೇಕೆ ತೊಂದರೆ ನೀನು ಊಟ ಮಾಡು ಎಂದು ಆಕೆಯನ್ನು ಸುಮ್ಮನಾಗಿಸಿದೆ.

ವ್ಯಕ್ತಿಗಳ ಮುಖಚರ್ಯೆ, ಸ್ಥಾನಮಾನ ನೋಡಿ, ಅವರೊಡನೇ ಮಾತನಾಡುವ ಕಲೆ ಆಕೆಗೆ ಸಿದ್ದಿಸಿತ್ತು. ಮಾತಿನ ಉಚ್ಚಾರ, ಎಷ್ಟು ಮಾತ್ರ ಮಾತನಾಡಬೇಕು, ಮಾತನಾಡುವವರ ಆಸಕ್ತಿ ನೋಡಿ ಯಾವ ವಿಷಯ ಮಾತನಾಡಬೇಕು ಎಲ್ಲವೂ ಕರಗತವಾಗಿತ್ತು. "ಏನ್ ಬುದ್ದಿ ಚೆನ್ನಾಗಿದ್ದೀರಾ? ಏನು ಕೆಲಸ ಮಾಡ್ತಾ ಇದ್ದೀರಾ? ನಿಮಗೆಷ್ಟು ಮಕ್ಕಳು? ದೇವರು ನಿಮ್ಮ ಹೆಂಡತಿ, ಮಕ್ಕಳನ್ನೂ ಸುಖವಾಗಿಡಲಿ" ಎಂದು ಮಂದಹಾಸದ ಮಾತು ಆರಂಭಿಸಿ, ನಿಧಾನಕ್ಕೆ ಕೊನೆಯಲ್ಲಿ ತನ್ನ ಸಂಕಷ್ಟ ಹೇಳಿಕೊಳ್ಳುತ್ತಾ, ಕೆಲವು ಅಕ್ಕ ಪಕ್ಕದ ಮನೆಯ ಕೆಲವು ಅಧಿಕಾರಿಗಳಿಗೂ ಬಹು ಬೇಗ ಪರಿಚಯವಾಗಿದ್ದಳು. ಈ ನಡುವೆ ಆಶ್ರಮದಲ್ಲಿ ನಡೆಯುತ್ತಿದ್ದ ನಾಮಕರಣ, ಹುಟ್ಟುಹಬ್ಬ, ತಿಥಿಯಂತಹ ಕಾರ್ಯಕ್ರಮಗಳಿಗೆ ಸ್ವಚ್ಛ ಮಾಡುವ, ಪಾತ್ರೆ ತೊಳೆಯುವ ಕೆಲಸಕ್ಕೆ ಹೋಗ ತೊಡಗಿದಳು. ಕೈ ಗಷ್ಟು ಹಣ ಸಿಗತೊಡಗಿತು, ಕಾರ್ಯಕ್ರಮ ಮುಗಿದ ಮೇಲೆ ಉಳಿದ ಅನ್ನ, ಸಾಂಬಾರ್, ತಿನಿಸುಗಳನ್ನು ತಂದು ಸಂಜೆಯ ಸಮಯದಲ್ಲಿ ರಸ್ತೆ ಬದಿಯಲ್ಲಿ ರದ್ದಿ ಆಯುವ ಹುಡುಗರನ್ನೆಲ್ಲಾ ಜೋರಾಗಿ ಕೂಗಿ ಕರೆದು ಎಲೆ ಹಾಕಿ "ತಿನ್ರಲೇ!!! ನನ್ ಮಕ್ಳಾ !" ಎಂದು ಅವರ ಸಂತೃಪ್ತಿಯಾಗುವಂತೆ ಊಟ ಹಾಕುತ್ತಿದ್ದಳು. ಅವರೆಲ್ಲರೂ ನಿಧಾನವಾಗಿ ಆಕೆಯ ಬಳಿ ಬಂದು ಮಾತನಾಡುವುದು, ಅವಳ ಮಾತುಗಳನ್ನು ಪಾಲಿಸಲು ಆರಂಭಿಸಿದರು. ಒಮ್ಮೆ ಒಂದು ಶಾಲೆ ಹೋಗುತ್ತಿದ್ದ ಹದಿಮೂರು, ಹದಿನಾಲ್ಕು ಹರೆಯದ ಹುಡುಗಿ ರಸ್ತೆಯಲ್ಲಿ ಅಳುತ್ತಾ ನಿಂತಿದ್ದಳು. ಅವಳ ಬಳಿಗೆ ಹೋಗಿ, ಅವಳನ್ನು ಬಳಿಗೆ ಕರೆದು ಏನೋ ಸಮಾಧಾನ ಹೇಳಿ ಆಕೆಯನ್ನು ಮನೆ ತಲುಪಿಸಿ ಬಂದಿದ್ದಳು. ಯಾಕಜ್ಜಿ, ಆ ಹುಡುಗಿ ಯಾಕೆ ಅಳುತ್ತಿದ್ದಳು, ಏನಾಗಿತ್ತಂತೆ ಎಂದೆವು. ನಿಮಾಗ್ಯಾಕೋ ಹೆಂಗಸರ ಸುದ್ದಿ ಎಂದು ಆ ಅನುಮಾನಕ್ಕೆ ಉತ್ತರ ನೀಡದೇ ಸುಮ್ಮನಾಗಿಸಿದ್ದಳು. ಮತ್ತೊಮ್ಮೆ ಗಂಡನಿಂದ ಏಟು ತಿಂದು ಒಬ್ಬ ಹೆಂಗಸು, ತನ್ನ ಎರಡು ವರ್ಷ ವಯಸ್ಸಿನ ಮಗನೊಂದಿಗೆ ರಸ್ತೆಯಲ್ಲಿ ಅಳುತ್ತಾ ಹೋಗುತ್ತಿದ್ದಾಗ ಆಕೆಯನ್ನು ಸಮಾಧಾನ ಮಾಡಿದ್ದಲ್ಲದೇ, ಅವನ ಮನೆ ಬಾಗಿಲಿಗೆ ಹೋಗಿ ಅವನಿಗೆ ಇನ್ನೊಮ್ಮೆ ಹೆಂಡತಿಗೆ ಹೊಡೆದರೇ ಪೊಲೀಸ್ ಕಂಪ್ಲೇಂಟ್ ಕೊಡುವುದಾಗಿ ಜೋರಾಗಿ ಹೆದರಿಸಿ ಬಂದಿದ್ದಳು. ಆಕೆಯೊಳಗೆ ನಾನು ಆವಾಗವಾಗ ಹೇಳುತ್ತಿದ್ದಂತೆ ಒಬ್ಬ ನಾಯಕಿ ಇಂದಿರಾಗಾಂಧಿ ಇದ್ದಳು. ಆಶ್ರಮದ ಟ್ರಸ್ಟಿಗಳು ಆಕೆಗೊಂದು ರೂಮು ಕಟ್ಟಿಸಿ ಕೊಡಲು ತಯಾರಾದರು. "ಲೋ! ಇವತ್ತು ಪೊಲೀಸ್ ಕಮಿಷನರ್ ಆಫೀಸ್‌ಗೆ ಹೋಗಿ ಹಳೆಯ ಆಶ್ರಮದ ಆ ಹೆಂಗಸಿನ ಮೇಲೆ ದೂರು ಕೊಟ್ಟು ಬಂದಿದ್ದೇನೆ, ನನ್ನ ದುಡ್ಡು ವಾಪಸ್ ಕೊಡಿಸ್ತಾರಂತೆ" ಎಂದಾಗ ಈರಮ್ಮಜ್ಜಿಗೆ ನ್ಯಾಯ, ಒಂದು ಶಾಶ್ವತ ನೆಮ್ಮದಿಯ ನೆಲೆ ಸಿಗುವ ಸೂಚನೆಗಳು ಮೂಡತೊಡಗಿ, ಮನಸ್ಸಿಗೆ ತುಸು ನಿರಾಳವಾಯಿತು. ಹಣ, ಅಂತಸ್ತು, ಅಧಿಕಾರಕ್ಕಾಗಿ ಹಪಹಪಿಸುವ ನಮ್ಮ ಸಂಬಂಧಗಳು ಸದಾ ಅವುಗಳಿಂದ ಹೊರತಾಗಿರದೇ ತಿಳಿದೂ ತಿಳಿಯದಂತಿರುತ್ತದೆ. ಸಾಧು ಸಮಾಜವೆಂಬ ಆ ಆಶ್ರಮದ ತನ್ನ ಸುಪರ್ದಿಯಲ್ಲಿ ನಡೆಯಬೇಕೆಂದು ಎಲ್ಲಾ ಟ್ರಸ್ಟಿಗಳಾದ ಜಟ್ಟಪ್ಪ, ಶಿವಣ್ಣ, ಮಾಣಿಕ್ಯಂ ಸದಾ ಮುಸುಕಿನ ಗುದ್ದಾಟದಲ್ಲಿ ತೊಡಗಿದ್ದರು. ಶಿವಾನಂದ ಪುರಿ ಎಂಬಾ ಆಂಧ್ರ ಪ್ರದೇಶದಿಂದ ಬಂದಿದ್ದ ಸಾಧುವಿನಿಂದ ಆಶ್ರಮಕ್ಕೆ ಹೆಚ್ಚಿನ ಆದಾಯ ದೇಣಿಗೆ ಬರುತ್ತಿಲ್ಲ ಅವರನ್ನು ಸಾಕುವುದು ಆಶ್ರಮಕ್ಕೆ ಹೊರೆಯಾಗುತ್ತಿದೆ ಎಂದೂ ಅವರ ಬಗ್ಗೆ ಅಸಡ್ಡೆ ಎಲ್ಲರಿಗೂ ದಿನ ದಿನಕ್ಕೂ ಹೆಚ್ಚಾಗುತ್ತಿತ್ತು. ಕೆಲವೊಮ್ಮೆ ತನಗಿಲ್ಲಿ ಇನ್ನು ಉಳಿಗಾಲವಿಲ್ಲ ಎಂದೂ ಕೆಲವೊಮ್ಮೆ ಬಿಡುವಿದ್ದಾಗ ನಮ್ಮಲ್ಲಿ ಸಂಕಟ ವ್ಯಕ್ತ ಪಡಿಸುತ್ತಿದ್ದರು. ಬೆಳ್ಳಿಗ್ಗೆ ಏಳಕ್ಕೆ ಆಶ್ರಮದ ಕಸ ಗುಡಿಸಿ, ನೆಲ ಸಾರಿಸಿ ಅವರ ಪಾತ್ರೆ ತೊಳೆದು ಕೊಡಲು ಐವತ್ತರ ಅಸುಪಾಸಿನ ರಾಜಮ್ಮ ಬಂದು ಹೋಗುತ್ತಿದ್ದಳು. ಆಶ್ರಮದ ನಡೆಯುತ್ತಿದ್ದ ನಾಮಕರಣ, ಹುಟ್ಟು ಹಬ್ಬ, ತಿಥಿ ಕಾರ್ಯಕ್ರಮಗಳ ಸ್ವಚ್ಛತೆಗೆ, ಪಾತ್ರೆ ತೊಳೆಯಲು ಈರಮ್ಮಜ್ಜಿಯ ಜೊತೆಗೆ ಬರುತ್ತಿದ್ದಳು. ಮೊದಮೊದಲಿಗೆ ಇವರಿಬ್ಬರೂ ಅನೋನ್ಯತೆಯಿಂದ ಇದ್ದರೂ ನಂತರ ನಿಧಾನಕ್ಕೆ ಅವರಿಬ್ಬರ ನಡುವೆ ಹಣ ಹಂಚಿಕೆಗೆ, ಉಳಿದ ಅಡುಗೆಯನ್ನು ತೆಗೆದುಕೊಂಡು ಹೋಗುವ ವಿಷಯಕ್ಕೆ ಮನಸ್ತಾಪ ಶುರುವಾಗತೊಡಗಿತು. ಈರಮ್ಮಜ್ಜಿಗೆ ಸಾಧುವಿನ ಬಗ್ಗೆ ಇರುವ ಅಸಡ್ಡೆ, ಸದಸ್ಯರ ನಡುವಿನ ಅಸೂಯೆಗಳು, ಅಲ್ಲಿ ಯಾರು ಪ್ರಬಲ, ದುರ್ಬಲ ಎನ್ನುವ ಸಂಗತಿಗಳು ಬಲು ಬೇಗ ಅರ್ಥವಾಗ ತೊಡಗಿತು. ಈ ನಡುವೆ ಆಶ್ರಮದ ಮೇಲುಗಡೆ ಮತ್ತೊಂದು ಸಭಾ ಮಂಟಪ ಜೊತೆಗೆ ಎರಡು ರೂಮುಗಳನ್ನು ಕಟ್ಟುವ ಕೆಲಸ ಆರಂಭವಾಯಿತು. ಮರಳು, ಕಬ್ಬಿಣ, ಸಿಮೆಂಟ್ ಕಾಯುವ ಕೆಲಸವನ್ನು ಅಜ್ಜಿಗೆ ವಹಿಸಲಾಯಿತು. ಅಬ್ಬಾ! ಎಂತಹ ಅಜ್ಜಿ.! ಹಗಲಿರಳು ಕಣ್ಣು ಎವೆಯಿಕ್ಕದೇ ಕಾಯ ತೊಡಗಿದಳು. ಜೀವನದಲ್ಲಿ ಎಂದೂ ಶಾಲೆ ಮೆಟ್ಟಿಲೇರದ ಆಕೆ ಪ್ರತಿ ದಿನ ಖರ್ಚಾದ ಸಿಮೆಂಟ್ ಚೀಲ, ಕಾಮಗಾರಿಯ ಬಗ್ಗೆ ಶಿಸ್ತಿನ ಸಿಪಾಯಿಯಂತೆ ಲೆಕ್ಕ ಕೊಡ ತೊಡಗಿದಳು. "ಲೋ ನೋಡ್ರಲ್ಲೊ! ನಮ್ಮ ಜಟ್ಟಪ್ಪ, ಶಿವಣ್ಣ ಇಬ್ಬರು ಸೇರಿ ನನಗೆ ರೂಮು ಕಟ್ಟಿಸಿ ಕೊಡುತ್ತಿದ್ದಾರೆ" ಎಂದು ಸದಾ ಹಸನ್ಮುಖಿಯಾಗಿ ಹೇಳುತ್ತಿದ್ದಳು. ಪ್ರತಿ ದಿನ ನಾವೆಲ್ಲರೂ ಏಳುವ ಎದ್ದು ಮುನ್ನವೇ ನಮ್ಮೆಲ್ಲರ ಬಾತ್ ರೂಮಿನಲ್ಲೇ ಸ್ನಾನ ಮುಗಿಸಿ ವಿಭೂತಿ ಧರಿಸಿ, ಊದುಬತ್ತಿ ಹಚ್ಚಿ ಆಶ್ರಮದಲ್ಲಿದ್ದ ಗಣೇಶ, ಲಕ್ಷ್ಮಿ, ಸರಸ್ವತಿ ಮೂರ್ತಿಗಳಿಗೆ ನಮಸ್ಕಾರ ಮಾಡಿ ಮುಗಿಸಿರುತ್ತಿದ್ದಳು.

ಒಮ್ಮೆ ಆಶ್ರಮದಲ್ಲಿ ಸಾಧು ಸಂತರ ಸಮಾಗಮ ನಡೆದಿತ್ತು. ವ್ಯವಸ್ಥೆಯ ಸಹಾಯಕ್ಕಾಗಿ ಆಶ್ರಮದಲ್ಲಿ ಬಾಡಿಗೆಗೆ ಇದ್ದ ನಮ್ಮೆಲ್ಲರನ್ನೂ ಕರೆದಿದ್ದರು. ದೊಡ್ಡದಾಗಿಯೇ ಜರುಗಿದ ಆ ಕಾರ್ಯಕ್ರಮಕ್ಕೆ ಪುರುಷ, ಮಹಿಳಾ ಸಾಧುಗಳು ಬಂದಿದ್ದರು. ಅವರ ಭಾಷಣ ನಡೆಯುತ್ತಿತ್ತು. ಅಜ್ಜಿ ನಾನಿದ್ದ ಕಡೆಗೆ ಓಡೋಡಿ ಬಂದಳು. "ಲೋ ಸ್ವಾಮಿ, ಆ ನನ್ನ ದುಡ್ಡು ತಿಂದಿರುವ ಕಳ್ಳಿ ಇಲ್ಲಿಗೂ ಬಂದವ್ಳೆ ನೋಡು ಬಾ" ಎಂದು ಕರೆದಳು. ಅಲ್ಲಿನ ಸಾಧುಗಳ ನಡುವೆ ಸಣ್ಣಗೆ, ತೆಳ್ಳಗಿನ, ಬಿಳಿ ಬಣ್ಣದ ಅರವತ್ತರ ಸುಮಾರಿನ ಕಾವಿ ಸೀರೆ ಉಟ್ಟು ವಿಭೂತಿ, ಜಪಮಾಲೆ ಧರಿಸಿದ ಮತ್ತೊಂದು ಅಜ್ಜಿ ಕುರ್ಚಿಯ ಮೇಲೆ ಕುಳಿತಿದ್ದರು. ನೋಡೊ ನೋಡೋ ಅವಳೇ ನನಗೆ ಅವಳೇ ಮೋಸ ಮಾಡಿದ್ದು ಎಂದಳು. ಅಜ್ಜಿ ಅವರ ಹೆಸರೇನು ಅಂದೆ. ಅವಳ ಹೆಸರು ಪುಟ್ಟೀರಮ್ಮ ಅಂತಾ , ಅವರನ್ನು ಮತ್ತೆ ನೋಡಿದೆ. ನಿರಾಳವಾದ ಪ್ರಶಾಂತ ಮುಖ, ನಿಜಕ್ಕೂ ಅವರ ಮಾತು, ವಿನಯ ಅವರೊಬ್ಬ ನಿಜಕ್ಕೂ ಸಾಧುವಿರಬೇಕು ಎನಿಸಿತು. ಮತ್ತೆ ಅವರ್ಯಾಕೆ ನಮ್ಮ ಈ ಈರಮ್ಮಜ್ಜಿಯನ್ನು ಆಶ್ರಮದಿಂದ ಹೊರ ಹಾಕಿರಬಹುದು ಎನ್ನುವ ಪ್ರಶ್ನೆಗಳು ಮೂಡತೊಡಗಿದವು.

ಎರಡು ದಿನ ಕಳೆಯಿತು. ಮಾಮೂಲಿನಂತೆ ಬೆಳಿಗ್ಗೆ ಸ್ನಾನಕ್ಕೆ ಕೆಳಗೆ ಬರುತ್ತಿದ್ದೆ. ಸ್ನಾನ ಮಾಡಿ, ಶುಭ್ರವಾಗಿದ್ದ ಅಜ್ಜಿಯ ಹಣೆಯಲ್ಲಿ ವಿಭೂತಿ, ಕೈ ಯಲ್ಲಿ ಊದುಬತ್ತಿಯಿತ್ತು ನನ್ನನ್ನೂ ನೋಡಿ ಗದ್ಗದಿತಳಾಗಿ ಆಳುತ್ತಾ.. "ನೋಡು, ಸ್ವಾಮಿ ನಾನು ಆಶ್ರಮದ ಒಳಗೆ ಮೂರ್ತಿಗೆ ಕೈ ಮುಗಿಯಲು ಹೋಗಬಾರದು ಅಂತಾ ಶಿವಾನಂದ ಪುರಿ ಸಾಧು ಬೈದರು. ಇದು ಆ ಪುಟ್ಟೀರಮ್ಮನದೇ ಕೈವಾಡ, ನನ್ನ ಬಗ್ಗೆ ಏನೋ ಚಾಡಿ ಹೇಳಿ ಹೋಗಿದ್ದಾಳೆ. ಒಳಗೆ ಕೈ ಮುಗಿಸಲು ಒಂದು ಮಾತು ಹೇಳು" ಎಂದೂ ಕೈ ಮುಗಿಯುತ್ತಾ ಹೇಳಿದಳು. ಶಿವಾನಂದ ಪುರಿ ಸಾಧುಗಳ ಹತ್ತಿರ ಹೋಗಿ ಈ ವಿಷಯ ಹೇಳುತ್ತಿದ್ದಂತೆ ಕೋಪಗೊಂಡ ಅವರು ನನ್ನನ್ನೂ ನೀನು ಆ ತರಲೆ ಅಜ್ಜಿಯ ಪರ ವಹಿಸಿ ಮಾತಾನಾಡಲು ನನ್ನ ಹತ್ತಿರ ಬರಕೂಡದು ಎಂದು ತಾಕೀತು ಮಾಡಿದರು.

**(ಕೃಪೆ) ಈದಿನಾ.ಕಾಂ)**
**- ಗಂಗಾಧರ ಸ್ವಾಮಿ**

